**ಬೆಂಜನಪದವು ಕೆನರಾ ಎಂಜಿನಿಯರಿಂಗ್ ಕಾಲೇಜು**

# ಜ.22: ಆಡಿಟೋರಿಯಂ ಉದ್ಘಾಟನೆ



ಮಂಗಳೂರು, ಜ.19: ಬೆಂಜನಪದವು ಕೆನರಾ ಎಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡ 2 ಸಾವಿರಕ್ಕೂ ಹೆಚ್ಚು ಆಸನ ವ್ಯವಸ್ಥೆಯುಳ್ಳ ಹವಾನಿಯಂತ್ರಿತ ಡಾ| ಪಿ. ದಯಾನಂದ ಪೈ - ಪಿ. ಸತೀಶ್ ಪೈ ಆಡಿಟೋರಿಯಂನ ಉದ್ಘಾಟನೆಯನ್ನು ಜ.22ರಂದು ಬೆಳಗ್ಗೆ 7.45ಕ್ಕೆ ಶ್ರೀಕಾಶೀ ಮಠಾಧಿಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರು ನೆರವೇರಿಸಲಿದ್ದಾರೆ.

ಇದೇ ಸಂದರ್ಭ ಆಡಿಟೋರಿಯಂ ಜತೆಗಿರುವ 300 ಆಸನ ವ್ಯವಸ್ಥೆಯ ಹವಾನಿಯಂತ್ರಿತ ಸೆಮಿನಾರ್ ಹಾಲ್, ಸ್ಟಾರ್ಟಪ್, ಇನ್ಕ್ಯುಬೇಶನ್ ಸೆಂಟರ್, ಉದ್ಯಮಶೀಲತಾ ಅಭಿವೃದ್ಧಿ ಘಟಕವೂ ಉದ್ಘಾಟನೆಗೊಳ್ಳಲಿವೆ.

ಈ ಆಡಿಟೋರಿಯಂನ ದಾನಿ, ಕೆನರಾ ಶಿಕ್ಷಣ ಸಂಸ್ಥೆಯ ಹಳೆ ವಿದ್ಯಾರ್ಥಿಗಳೂ ಆಗಿರುವ ಉದ್ಯಮಿ ಡಾ| ಪಿ. ದಯಾನಂದ ಪೈ - ಪಿ. ಸತೀಶ್ ಪೈ ಮತ್ತು ಅವರ ಪರಿವಾರದವರು, ಶಾಸಕ ಡಿ. ವೇದವ್ಯಾಸ ಕಾಮತ್ ಸಹಿತ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

**ಸಭಾಂಗಣದ ವಿಶೇಷತೆ**

ಕಾಲೇಜಿನ ಪ್ರಕೃತಿ ರಮಣೀಯ ಪರಿಸರದಲ್ಲಿ ಆಕರ್ಷಕ ಹೊರ, ಒಳಾಂಗಣ ವಿನ್ಯಾಸದೊಂದಿಗೆ ಕೇಂದ್ರೀಕೃತ ಹವಾನಿಯಂತ್ರಿಕ ವ್ಯವಸ್ಥೆ, ವಿನೂತನ ಧ್ವನಿವರ್ಧಕ ವ್ಯವಸ್ಥೆಗಳು, 2,900 ಚದರ ಅಡಿ ವ್ಯಾಪ್ತಿಯ ಸ್ಥಳಾವಕಾಶ, ನಿರಂತರ ವಿದ್ಯುತ್ ಪೂರೈಕೆ, ವಿಶಾಲ ಪಾರ್ಕಿಂಗ್ ಸೌಲಭ್ಯಗಳು ಈ ಆಡಿಟೋರಿಯಂಗೆ ಇನ್ನಷ್ಟು ಮೆರುಗು ನೀಡಿವೆ.

**ಹೊಸ ಯೋಚನೆ, ಸಂಶೋಧನೆಗೆ ವೇದಿಕೆ**

ನೂತನ ಆಡಿಟೋರಿಯಂ ಪ್ರತಿಭೆಗಳಿಗೆ ವೇದಿಕೆ, ಸಂಶೋಧನೆ, ಹೊಸತನದ ಯೋಚನೆಗಳನ್ನು ಕಾರ್ಯ ರೂಪಕ್ಕಿಳಿಸುವ ತಾಣವಾಗಲಿದೆ. ವಿಶ್ವ ದರ್ಜೆಯ ಸೌಲಭ್ಯಗಳು ನಮ್ಮ ವಿದ್ಯಾರ್ಥಿಗಳಿಗೆ ದೊರೆಯಬೇಕೆಂಬ ಕನಸು ಇಲ್ಲಿ ನನಸಾಗುತ್ತಿದೆ ಎಂದು ಕಾಲೇಜಿನ ಸಂಚಾಲಕರೂ ಆಗಿರುವ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಕಾರ್ಯದರ್ಶಿ ಎಂ. ರಂಗನಾಥ ಭಟ್ ತಿಳಿಸಿದ್ದಾರೆ.

ಶಿಕ್ಷಣ, ಸಂಶೋಧನೆ ಮತ್ತು ವಿದ್ಯಾರ್ಥಿಗಳ ಅಭಿವೃದ್ಧಿ ಚಟುವಟಿಕೆಗಳಲ್ಲಿ ನಿರಂತರ ಸಾಧನೆಯಿಂದ ಈಗ ಸ್ವಾಯತ್ತ ಸಂಸ್ಥೆಯಾಗುವ ಹಾದಿಯಲ್ಲಿರುವ ಕೆನರಾ ಎಂಜಿನಿಯರಿಂಗ್ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ನೂತನ ಆಡಿಟೋರಿಯಂ ಗಮನಾರ್ಹ ಕೊಡುಗೆಯಾಗಿದೆ.

ಉದಯವಾಣಿ : 20.01.2025

# ಕೆನರಾ ಎಂಜಿನಿಯರಿಂಗ್ ಕಾಲೇಜು, ಕರುನಾಡು ಟೆಕ್ನಾಲಜೀಸ್ ಶೈಕ್ಷಣಿಕ ಒಪ್ಪಂದ



**ಮಂಗಳೂರು, ಜ. 18:** ಕೆನರಾ ಎಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇನ್ನರೇಶನ್ ಸೈನ್ಸ್ ವಿಭಾಗವು ಕರುನಾಡು ಟೆಕ್ನಾಲಜೀಸ್ ಬೆಂಗಳೂರು ಜತೆ ಶೈಕ್ಷಣಿಕ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಮಾಡಿಕೊಂಡಿದೆ.

ಶೈಕ್ಷಣಿಕ ಮತ್ತು ಕೈಗಾರಿಕೆಗೆ ಸಂಬಂಧಿಸಿದಂತೆ ಸಹಭಾಗಿತ್ವವನ್ನು ವೃದ್ಧಿಸಲು ಈ ಒಪ್ಪಂದ ಸಹಕಾರಿಯಾಗಲಿದೆ. ಈ ಒಪ್ಪಂದದಂತೆ ಬೋಧಕರ ಪರಿಣತಿ, ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿ ಕೈಗಾರಿಕೆಗೆ ಸಂಬಂಧಿಸಿದಂತೆ ಪಠ್ಯವಸ್ತು ರೂಪಿಸುವುದು, ಜಂಟಿ ಸಂಶೋಧನ ಚಟುವಟಿಕೆಗಳು, ಜ್ಞಾನ ವಿನಿಮಯ, ಇಂಟರ್ ಶಿಪ್, ಉದ್ಯಮಶೀಲತಾ ಚಟುವಟಿಕೆಗಳು, ಬೋಧಕರು ಮತ್ತು ವಿದ್ಯಾರ್ಥಿಗಳಿಗೆ ಸಮಕಾಲೀನ ತಂತ್ರಜ್ಞಾನದ ಪ್ರಾಯೋಗಿಕ ಅನ್ವಯ, ತ್ವರಿತವಾಗಿ ಬದಲಾಗುತ್ತಿರುವ ತಾಂತ್ರಿಕ ಅಗತ್ಯಗಳಿಗೆ ಸ್ಪಂದಿಸುವ ವೇದಿಕೆ ಇದಾಗಲಿದೆ.

ಉದಯವಾಣಿ · 19-01-2025

20-11-2024
UDAYAVANI - MANIPAL

**ಕೆನರಾ ಎಂಜಿನಿಯರಿಂಗ್ ಕಾಲೇಜು ಮತ್ತು ಸೆಕ್ಷನ್ ಇನ್ಫಿನಿಟಿ 8 ಫೌಂಡೇಶನ್**

# ಇನ್ಕ್ಯುಬೇಶನ್ ಸೆಂಟರ್ ಸ್ಟಾರ್ಟ್‌ಅಪ್ ಇಕೋಸಿಸ್ಟಮ್ ವೃದ್ಧಿಗಾಗಿ ಒಪ್ಪಂದ



ಮಂಗಳೂರು, ನ. 19: ನೂತನ ಇನ್ಕ್ಯುಬೇಶನ್ ಸೆಂಟರ್ ಹಾಗೂ ಸ್ಟಾರ್ಟ್‌ಅಪ್ ಇಕೋಸಿಸ್ಟಮ್ ವೃದ್ಧಿಗಾಗಿ ಕೆನರಾ ಎಂಜಿನಿಯರಿಂಗ್ ಕಾಲೇಜು ಮತ್ತು ಸೆಕ್ಷನ್ ಇನ್ಫಿನಿಟಿ 8 ಫೌಂಡೇಶನ್ ಪರಸ್ಪರ ಒಪ್ಪಂದ ಮಾಡಿಕೊಂಡಿವೆ.

ಕೆನರಾ ಶಿಕ್ಷಣ ಸಂಸ್ಥೆಗಳ ಸ್ಥಾಪಕ ಅಮ್ಮೆಂಬಳ ಸುಬ್ಬರಾವ್ ಪೈ ಅವರ ಜನ್ಮದಿನಾಚರಣೆಯ ಸಂದರ್ಭ ಉದ್ಯಮಶೀಲತೆಯ ಪರಂಪರೆಯನ್ನು ಮುಂದಿನ ಯುವ ಪೀಳಿಗೆಗಾಗಿ ಮುನ್ನಡೆಸುವ ಸಂಕಲ್ಪದೊಂದಿಗೆ ಮಂಗಳವಾರ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

ಕೆನರಾ ಸಿಬಿಎಸ್‌ಇ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಜರಗಿದ ಈ ಸಮಾರಂಭದಲ್ಲಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಕಾರ್ಯದರ್ಶಿ ಎಂ. ರಂಗನಾಥ ಭಟ್, ಜತೆ ಕಾರ್ಯದರ್ಶಿ ಟಿ. ಗೋಪಾಲಕೃಷ್ಣ ಶೆಣೈ, ಕೆನರಾ ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ| ನಾಗೇಶ್ ಎಚ್. ಆರ್. ಸೆಕ್ಷನ್ ಇನ್ಫಿನಿಟಿ 8 ಫೌಂಡೇಶನ್ ನಿರ್ದೇಶಕ ವಿಶ್ವಾಸ್ ಉಚ್ಚಿಲ ಶಿಶಿರ್, ಸಿಎಫ್‌ಒ ಪ್ರೇಕ್ಷಾ ತೇಜ್, ಕಾಲೇಜಿನ ಬೋಧಕರು ಮತ್ತು ಆಡಳಿತ ಪ್ರಮುಖರು ಉಪಸ್ಥಿತರಿದ್ದರು.

ಈ ಒಪ್ಪಂದದಂತೆ ಇನ್ಕ್ಯುಬೇಶನ್ ಸೆಂಟರ್ ಮೂಲಕ ಕಾಲೇಜಿನ ಬೋಧಕರು, ವಿದ್ಯಾರ್ಥಿಗಳ, ಸ್ಥಳೀಯ ಸಮುದಾಯದ ಸಬಲೀಕರಣ, ವಿನೂತನ ಸ್ಟಾರ್ಟ್‌ಅಪ್ ಚಿಂತನೆಗಳನ್ನು ಅಭಿವೃದ್ಧಿ ಪಡಿಸಿ ಯಶಸ್ಸು ಪಡೆಯುವ ಗುರಿ ಹೊಂದಲಾಗಿದೆ. ಈ ದಶಕದಲ್ಲಿ ಯುವ ಎಂಜಿನಿಯರಿಂಗ್ ಪದವೀಧರರು ತಾಂತ್ರಿಕ ಕೌಶಲ ಹೊಂದಿದ್ದರೆ ಸಾಲದು, ಸಮಾಜದ ಸವಾಲನ್ನೆದುರಿಸಿ ಉದ್ಯಮಶೀಲ ಮನೋಭಾವ ಹೊಂದಿರಬೇಕು. ಈ ಒಪ್ಪಂದವು ಪ್ರತಿಭಾನ್ವಿತರ ಸ್ಟಾರ್ಟ್‌ಅಪ್ ಯಶಸ್ಸಿನ ಪಯಣದಲ್ಲಿ ವೇಗ ನೀಡಲಿದೆ ಎಂದು ಪ್ರಾಂಶುಪಾಲ ಡಾ| ನಾಗೇಶ್ ಎಚ್.ಆರ್. ತಿಳಿಸಿದ್ದಾರೆ.

ಉದಯವಾಣಿ : 20.11.2024.

# CANARA COLLEGE

## FACULTY REQUIREMENT

- **BCA - Lecturer in Computer Science**
  Qualifications M.Sc in Compt. Sc. /MCA-Minimum 55%
  NET/KSET/Ph.D Preferred
- **English - Lecturer**
  Qualifications M.A- Minimum 55%
  NET/KSET/Ph.D Preferred
- **Office (Office Assistant)**
  Qualifications B.com with Experience
- **Computer Science Lab Instructors**
  Qualifications B.Sc (Compt.Sc.) /BCA

Interested candidates to kindly send their resume on or before July 29, 2024.

*Apply with updated resume & recent Photograph to*

**The Principal**
**Canara College, M.G.Road,**
**Kodialbail, Mangalore - 575003.**
**Email : cnrcollege@yahoo.co.in**
**Ph : +91 94489 31103**

CANARA
COLLEGE

ಉದಯವಾಣಿ · 22-07-2024

# ಉದ್ಯೋಗಿಗಳಲ್ಲ, ಉದ್ಯಮಿಗಳಾಗುವ ಕನಸಿರಲಿ

## ಕೆನರಾ ಎಂಜಿನಿಯರಿಂಗ್ ಕಾಲೇಜಿನ ನೂತನ ಬ್ಯಾಚ್ ಪ್ರಾರಂಭೋತ್ಸವದಲ್ಲಿ ರಂಗನಾಥ ಭಟ್

ಮಹಾನಗರ, ಸೆ. 18: ವಿಜ್ಞಾನ ಎನ್ನುವುದು ಜ್ಞಾನವಾದರೆ ಎಂಜಿನಿಯರಿಂಗ್ ಎನ್ನುವುದು ತಂತ್ರಜ್ಞಾನ. ಈ ಪ್ರಾಯೋಗಿಕ ಜ್ಞಾನದಿಂದಲೇ ನಿತ್ಯ ಎಂಬಂತೆ ಜಗತ್ತಿನ ಆವಿಷ್ಕಾರ, ಬೆಳವಣಿಗೆಗಳು ನಡೆಯುತ್ತಲೇ ಇವೆ. ಭಾರತ, ಜಾಗತಿಕವಾಗಿ ಅಭಿವೃದ್ಧಿಯ ಪಥದಲ್ಲಿ ಮುಂಚೂಣಿಗೆ ಬರುವಲ್ಲಿ ಯುವ ಎಂಜಿನಿಯರ್‌ಗಳ ಸವಾಲುಗಳನ್ನೆದುರಿಸುವ ಜಾಣ್ಮೆ ಪ್ರತಿಭೆಯ ಅಗತ್ಯವಿದೆ ಎಂದು ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಗೌರವ ಕಾರ್ಯದರ್ಶಿ, ಕೆನರಾ ಎಂಜಿನಿಯರಿಂಗ್ ಕಾಲೇಜಿನ ಸಂಚಾಲಕ ಎಂ. ರಂಗನಾಥ್ ಭಟ್ ಹೇಳಿದರು.

ಅವರು ನಗರದ ಟಿ.ವಿ. ರಮಣ್ ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ರವಿವಾರ ಜರಗಿದ ಕೆನರಾ ಎಂಜಿನಿಯರಿಂಗ್ ಕಾಲೇಜಿನ 2024ನೇ ಸಾಲಿನ ನೂತನ ಬ್ಯಾಚ್ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.

ತಾಂತ್ರಿಕ ಶಿಕ್ಷಣದ ಪದವಿಯೊಂದಿಗೆ ಉದ್ಯೋಗಿಗಳಾಗುವುದಕ್ಕಿಂತ ತಾವೇ ಉದ್ಯಮಿಗಳಾಗುವ ಉಜ್ವಲ ಭವಿಷ್ಯಕ್ಕೆ



ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶಿಸುವ ವಿದ್ಯಾರ್ಥಿಗಳು ವಿಶ್ವಾಸದೊಂದಿಗೆ ಸಜ್ಜಾಗಬೇಕಿದೆ ಎಂದರು.

ಆಡಳಿತ ಮಂಡಳಿಯ ವಿಶೇಷ ಆಹ್ವಾನಿತ ಸಿಎ ಗಿರಿಧರ್ ಕಾಮತ್ ಮಾತನಾಡಿ, ಶಿಕ್ಷಣದ ಜತೆಗೆ ಭಾಷಾ, ಸಂವಹನ ಕೌಶಲ, ಶಿಷ್ಟಾಚಾರಗಳ ತಿಳಿವಳಿಕೆ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತವೆ ಎಂದರು.

ಆಡಳಿತ ಮಂಡಳಿ ಉಪಾಧ್ಯಕ್ಷ ಕೆ. ಸುರೇಶ್ ಕಾಮತ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ಡೀನ್ ಡಾ| ಪ್ರಿಯಾ ವಿ. ಫ್ರಾಂಕ್, ನೇಮಕಾತಿ, ತರಬೇತಿ ವಿಭಾಗದ ಸಂಪರ್ಕ ಮುಖ್ಯಸ್ಥೆ ದೀಪ್ತಿ ದಿನೇಶ್ ಪ್ರಭು ಹೊಸ ಬ್ಯಾಚಿನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ| ನಾಗೇಶ್ ಎಚ್.ಆರ್. ಸ್ವಾಗತಿಸಿದರು. ಸಹ ಪ್ರಾಧ್ಯಾಪಿಕೆ ಕ್ಯಾರಲ್ ಡಿ'ಮೆಲ್ಲೋ ನಿರೂಪಿಸಿ, ವಂದಿಸಿದರು. ಉಪ ಪ್ರಾಂಶುಪಾಲ ಅಕಾಡೆಮಿಕ್ ಡೀನ್ ಡಾ| ಡೇಮಿಯನ್ ಎ. ಡಿ'ಮೆಲ್ಲೋ ಹಾಗೂ ಮೊದಲಾದವರು ಈ ವೇಳೆ ಉಪಸ್ಥಿತರಿದ್ದರು.

ಉದಯವಾಣಿ ಸೆ. 18.2024.

# CANARA ENGINEERING COLLEGE

CANARA Sudhindra Nagar, Benjanapadavu, Bantwal, Mangaluru - 574219

## FACULTY AND STAFF RECRUITMENT

Canara Engineering College (CEC), a unit of Canara High School Association was established in the year 2001, NAAC accredited with A Grade (CGPA: 3.24) and certified with ISO 9001:2015 & 21001:2018. Most of the UG programs of CEC are Accredited by NBA and has several ongoing innovative practices aimed at enhancing student skills through OBE practices, research and innovation.

Applications are invited from the eligible candidates for faculty positions in the following departments:

- **Computer Science & Engineering**
- **Information Science & Engineering**
- **Computer Science & Design**
- **Computer Science & Business System**
- **Artificial Intelligence & Machine Learning**
- **Electronics and Communication Engineering**
- **Mathematics**

**Staff: Hostel Warden**

**Candidates can submit applications and resumes to hr@canaraengineering.in within 7 days.**

**PRINCIPAL**

ಉದಯವಾಣಿ: 01.08.2024.

## ಕೆನರಾ ಎಂಜಿನಿಯರಿಂಗ್ ಕಾಲೇಜ್

# ಐಎಸ್‌ಒ 9001:2015, 21001:2018 ಪ್ರಮಾಣಪತ್ರ

ಮಂಗಳೂರು, ಜು. 16: ನಗರದ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಪ್ರಾಯೋಜಿತ ಬೆಂಜನಪದವಿನ ಕೆನರಾ ಎಂಜಿನಿಯರಿಂಗ್ ಕಾಲೇಜಿಗೆ ಪ್ರತಿಷ್ಠಿತ ಐಎಸ್‌ಒ 9001:2015 ಮತ್ತು ಐಎಸ್‌ಒ 21001:2018 ಪ್ರಮಾಣಪತ್ರದ ಮಾನ್ಯತೆ ಲಭಿಸಿದೆ.

ಕಾಲೇಜಿನ ಮೂರು ಕೋರ್ಸುಗಳಿಗೆ 2022ರಲ್ಲಿ ಎನ್‌ಬಿಎ ಮಾನ್ಯತೆ, 2023ರಲ್ಲಿ ನ್ಯಾಕ್ ಎಕ್ರೆಡಿಟೇಶನ್‌ನಲ್ಲಿ 'ಎ' ಗ್ರೇಡ್ ಮಾನ್ಯತೆ ಪಡೆದಿತ್ತು. ಇದೀಗ ಕಾಲೇಜು ಮತ್ತೊಂದು ಮಹತ್ವದ ಸಾಧನೆ ದಾಖಲಿಸಿದೆ. ಈ ಮೂಲಕ ಸಂಸ್ಥೆಯ ಉನ್ನತ ಮಟ್ಟದ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳಿಗೆ ಗೌರವ ದೊರೆತಂತಾಗಿದೆ. ಕೆನರಾ ಎಂಜಿನಿಯರಿಂಗ್ ಕಾಲೇಜಿನ ಕಲಿಕಾ ಮತ್ತು ಬೋಧನಾ ಪ್ರಕ್ರಿಯೆಗಳು ರಾಷ್ಟ್ರೀಯ ಗುಣಮಟ್ಟದಲ್ಲಿರುವುದು ಈ ಮಾನ್ಯತೆಯಿಂದ ಖಚಿತಗೊಂಡಿದೆ.

ಆ ಭಾಗದಲ್ಲಿ ಐಎಸ್‌ಒ ಮಾನ್ಯತೆ ಪಡೆದ ಮೊದಲ ಎಂಜಿನಿಯರಿಂಗ್ ಕಾಲೇಜು ಎನ್ನುವ ಹಿರಿಮೆಗೆ ಕೆನರಾ ಎಂಜಿನಿಯರಿಂಗ್ ಕಾಲೇಜು ಪಾತ್ರವಾಗಿದೆಯಲ್ಲದೆ ಬೋಧನೆಯಲ್ಲಿ ಪರಿಣಾಮಕಾರಿ ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯಾಗಿ ಗುರುತಿಸಲ್ಪಟ್ಟಿದೆ.

ಇಂಟರ್ ನ್ಯಾಶನಲ್ ಎಕ್ರೆಡಿಟೇಶನ್ ಟ್ರೆಡಿಶನ್ ಸರ್ವೀಸ್ (ಐಎಎಸ್) ಮಾನ್ಯತೆ ಪಡೆದ ಗ್ಲೋಬಲ್ ಎಂಸಿಎಸ್ ಲಿಮಿಟೆಡ್ ಸಂಸ್ಥೆಯು ಪ್ರಮಾಣಪತ್ರವನ್ನು ನೀಡುತ್ತಿದ್ದು ಇದಕ್ಕೆ ಪೂರ್ವಭಾವಿಯಾಗಿ ಕಾಲೇಜಿಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ಮತ್ತು ಅವಲೋಕನ ನಡೆಸಿದೆ. ಕಾಲೇಜು ಕಲಿಕಾ ಮತ್ತು ಬೋಧನಾ ಗುಣಮಟ್ಟ ಘನತೆ ಹಾಗೂ ಪರಿಪೂರ್ಣತೆಯನ್ನು ಸಾಧಿಸಿದೆ. ಈ ಮಾನ್ಯತೆ ವಿದ್ಯಾರ್ಥಿಗಳಿಗೆ ಅತ್ಯುನ್ನತ ಗುಣಮಟ್ಟದ ಕಲಿಕಾ ಅನುಭವಗಳನ್ನು ಒದಗಿಸಲು ಸಾಧ್ಯವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಔದ್ಯೋಗಿಕ ಭವಿಷ್ಯ ಉಜ್ವಲಗೊಳಿಸಿದಂತಾಗಿದೆ ಎಂದು ತಿಳಿಸಿದೆ.

ಉದಯವಾಣಿ : 17.07.2024.

ಕೆನರಾ ಎಂಜಿನಿಯರಿಂಗ್ ಕಾಲೇಜ್

# ಐಎಸ್‌ಒ 9001:2015, 21001:2018 ಪ್ರಮಾಣಪತ್ರ

ಮಂಗಳೂರು, ಜು. 16: ನಗರದ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಪ್ರಾಯೋಜಿತ ಬೆಂಜನಪದವಿನ ಕೆನರಾ ಎಂಜಿನಿಯರಿಂಗ್ ಕಾಲೇಜಿಗೆ ಪ್ರತಿಷ್ಠಿತ ಐಎಸ್‌ಒ 9001:2015 ಮತ್ತು ಐಎಸ್‌ಒ 21001:2018 ಪ್ರಮಾಣಪತ್ರದ ಮಾನ್ಯತೆ ಲಭಿಸಿದೆ.

ಕಾಲೇಜಿನ ಮೂರು ಕೋರ್ಸುಗಳಿಗೆ 2022ರಲ್ಲಿ ಎನ್‌ಬಿಎ ಮಾನ್ಯತೆ, 2023ರಲ್ಲಿ ನ್ಯಾಕ್ ಎಕ್ರೆಡಿಟೇಶನ್‌ನಲ್ಲಿ 'ಎ' ಗ್ರೇಡ್ ಮಾನ್ಯತೆ ಪಡೆದಿತ್ತು. ಇದೀಗ ಕಾಲೇಜು ಮತ್ತೊಂದು ಮಹತ್ವದ ಸಾಧನೆ ದಾಖಲಿಸಿದೆ. ಈ ಮೂಲಕ ಸಂಸ್ಥೆಯ ಉನ್ನತ ಮಟ್ಟದ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳಿಗೆ ಗೌರವ ದೊರೆತಂತಾಗಿದೆ. ಕೆನರಾ ಎಂಜಿನಿಯರಿಂಗ್ ಕಾಲೇಜಿನ ಕಲಿಕಾ ಮತ್ತು ಬೋಧನಾ ಪ್ರಕ್ರಿಯೆಗಳು ರಾಷ್ಟ್ರೀಯ ಗುಣಮಟ್ಟದಲ್ಲಿರುವುದು ಈ ಮಾನ್ಯತೆಯಿಂದ ಖಚಿತಗೊಂಡಿದೆ.

ಆ ಭಾಗದಲ್ಲಿ ಐಎಸ್‌ಒ ಮಾನ್ಯತೆ ಪಡೆದ ಮೊದಲ ಎಂಜಿನಿಯರಿಂಗ್ ಕಾಲೇಜು ಎನ್ನುವ ಹಿರಿಮೆಗೆ ಕೆನರಾ ಎಂಜಿನಿಯರಿಂಗ್ ಕಾಲೇಜು ಪಾತ್ರವಾಗಿದೆಯಲ್ಲದೆ ಬೋಧನೆಯಲ್ಲಿ ಪರಿಣಾಮಕಾರಿ ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯಾಗಿ ಗುರುತಿಸಲ್ಪಟ್ಟಿದೆ.

ಇಂಟರ್ ನ್ಯಾಶನಲ್ ಎಕ್ರೆಡಿಟೇಶನ್ ಟ್ರೆಡಿಶನ್ ಸರ್ವೀಸ್ (ಐಎಎಸ್) ಮಾನ್ಯತೆ ಪಡೆದ ಗ್ಲೋಬಲ್ ಎಂಸಿಎಸ್ ಲಿಮಿಟೆಡ್ ಸಂಸ್ಥೆಯು ಪ್ರಮಾಣಪತ್ರವನ್ನು ನೀಡುತ್ತಿದ್ದು ಇದಕ್ಕೆ ಪೂರ್ವಭಾವಿಯಾಗಿ ಕಾಲೇಜಿಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ಮತ್ತು ಅವಲೋಕನ ನಡೆಸಿದೆ. ಕಾಲೇಜು ಕಲಿಕಾ ಮತ್ತು ಬೋಧನಾ ಗುಣಮಟ್ಟ ಘನತೆ ಹಾಗೂ ಪರಿಪೂರ್ಣತೆಯನ್ನು ಸಾಧಿಸಿದೆ. ಈ ಮಾನ್ಯತೆ ವಿದ್ಯಾರ್ಥಿಗಳಿಗೆ ಅತ್ಯುನ್ನತ ಗುಣಮಟ್ಟದ ಕಲಿಕಾ ಅನುಭವಗಳನ್ನು ಒದಗಿಸಲು ಸಾಧ್ಯವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಔದ್ಯೋಗಿಕ ಭವಿಷ್ಯ ಉಜ್ವಲಗೊಳಿಸಿದಂತಾಗಿದೆ ಎಂದು ತಿಳಿಸಿದೆ.

ಉದಯವಾಣಿ : 17.07.2024.

## ಕೆನರಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪ್ರದಾನ

# ಸವಾಲು, ಸ್ಪರ್ಧಾತ್ಮಕ ಬದುಕಿಗೆ ಸನ್ನದ್ಧರಾಗಿ: ಪ್ರದೀಪ್ ಜಿ. ಪೈ ಕರೆ




ಮಂಗಳೂರು, ಜೂ. 1: ಅಮೆರಿಕ ವರ್ಷಕ್ಕೆ ಲಕ್ಷ ಎಂಜಿನಿಯರಿಂಗ್ ಪದವೀಧರರನ್ನು ಸೃಷ್ಟಿಸಿದರೆ ಭಾರತದಲ್ಲಿ ಈ ಸಂಖ್ಯೆ 15 ಲಕ್ಷ ಮೀರುತ್ತದೆ. ಕೇವಲ ಪದವಿಯಿಂದ ಯಶಸ್ಸು ಸಾಧ್ಯವಿಲ್ಲ, ವೃತ್ತಿ ಜೀವನದ ಸವಾಲು, ಸ್ಪರ್ಧಾತ್ಮಕತೆಗೆ ಸನ್ನದ್ಧರಾದಾಗ, ನಿರಂತರ ಕಲಿಕೆಗೆ ಆಸಕ್ತರಾದಾಗ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ ಎಂದು ಕೆನರಾ ಎಂಜಿನಿಯರಿಂಗ್ ಕಾಲೇಜಿನ ಆಡಳಿತಸಮಿತಿಸಂಚಾಲಕ, ಹ್ಯಾಂಗ್ಯೋ ಐಸ್‌ಕ್ರೀಂನ ಆಡಳಿತ ನಿರ್ದೇಶಕ ಪ್ರದೀಪ್ ಜಿ. ಪೈಹೇಳಿದರು.

ನಗರದ ಟಿ.ವಿ. ರಮಣ ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ಶನಿವಾರ ಜರಗಿದ ಕೆನರಾ ಎಂಜಿನಿಯರಿಂಗ್ ಕಾಲೇಜಿನ 20ನೇ ಬ್ಯಾಚಿನ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾಲೇಜಿನ ಸಂಚಾಲಕ, ಗೌರವ ಕಾರ್ಯದರ್ಶಿ ಎಂ. ರಂಗನಾಥ್ ಭಟ್ ಮಾತನಾಡಿ ಕೆನರಾ ಸಂಸ್ಕೃತಿಯೊಂದಿಗೆ ಬೆಳೆದ ಪದವೀಧರರಿಗೆ ಉಜ್ವಲ ಭವಿಷ್ಯವಿದೆ. ಹೆತ್ತವರ ಕನಸೀಗ ನನಸಾಗಿದೆ. ಮುಂದೆ ಉದ್ಯಮರಂಗದಲ್ಲೂ ಯಶಸ್ಸು, ಸಾಧನೆ ನಿಮ್ಮದಾಗಲಿ ಎಂದು ಹಾರೈಸಿದರು.

ಉಪ ಪ್ರಾಂಶುಪಾಲ ಡಾ। ಡೇಮಿಯನ್ ಎ. ಡಿಮೆಲ್ಲೋ ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಿದರು.

ಅಧ್ಯಕ್ಷತೆವಹಿಸಿದ್ದಆಡಳಿತಮಂಡಳಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಉಪಾಧ್ಯಕ್ಷ ಕೆ. ಸುರೇಶ್ ಕಾಮತ್ ಮಾತನಾಡಿ, ಹೆತ್ತವರ ತ್ಯಾಗ, ಶಿಕ್ಷಕರ ಸಹಕಾರ, ಕಲಿತ ಸಂಸ್ಥೆಯ ಕೊಡುಗೆಯನ್ನು ಪದವೀಧರರೆಂದೂ ಮರೆಯಬಾರದು ಎಂದರು. ವಿದ್ಯಾರ್ಥಿಗಳಾದ ವಿಜಯರಾಜ್ ಪೈ, ಗಿರಿಧರ ಕಿಣಿ, ಎಸ್. ಸಂಜನಾ ಪೈ, ಅಕ್ಷಯ್ ಅನಿಸಿಕೆ ವ್ಯಕ್ತಪಡಿಸಿದರು. ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಕಾಲೇಜಿನ ಆಡಳಿತ ಮಂಡಳಿಯ ಜತೆಕಾರ್ಯದರ್ಶಿ ಟಿ.ಗೋಪಾಲಕೃಷ್ಣ ಶೆಣೈ, ಸದಸ್ಯೆ ಅಶ್ವಿನಿ ಕಾಮತ್, ವಿಶೇಷ ಆಹ್ವಾನಿತ ಗಿರಿಧರ್ ಕಾಮತ್, ಆಡಳಿತ ಸಮಿತಿ ಸದಸ್ಯ ವಿನಾಯಕ ಕಾಮತ್, ಕಾಲೇಜಿನ ಡೀನ್ ಎಕ್ರೆಡಿಟೇಶನ್ ಡಾ। ವೆಂಕಟೇಶ್ ಎನ್., ವಿಭಾಗಗಳ ಮುಖ್ಯಸ್ಥರಾದ ಡಾ। ಸುನೀಲ್ ಕುಮಾರ್ ಬಿ.ಎಲ್, ಡಾ। ಎಚ್. ಮನೋಜ್ ಗಡಿಯಾರ್, ಡಾ। ದಯಾನಂದ್ ಜಿ.ಕೆ. ಸಮಾರಂಭದ ಮುಖ್ಯ ಸಮನ್ವಯಕಾರರಾದ ಜಯಶ್ರೀ ಕೆ, ಅನಂತ ಕೃಷ್ಣ ಕಾಮತ್ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಡಾ। ನಾಗೇಶ್ ಎಚ್.ಆರ್. ಸ್ವಾಗತಿಸಿದರು. ಸಹ ಪ್ರಾಧ್ಯಾಪಕಿ ಕ್ಯಾರಲ್ ಡಿ'ಮೆಲ್ಲೋ ಸಾಧಕ ವಿದ್ಯಾರ್ಥಿಗಳ ವಿವರ ನೀಡಿ ವಂದಿಸಿದರು. ನೇಮಕಾತಿ, ತರಬೇತಿ ವಿಭಾಗ, ಹಳೆ ವಿದ್ಯಾರ್ಥಿ ಸಂಪರ್ಕ ಮುಖ್ಯಸ್ಥೆ ದೀಪ್ತಿ ದಿನೇಶ್ ಪ್ರಭು ನಿರೂಪಿಸಿದರು.

ಉದಯವಾಣಿ 02-06-2024

# ರಾಜ್ಯಮಟ್ಟದ ತಾಂತ್ರಿಕ ಸಾಂಸ್ಕೃತಿಕ ಉತ್ಸವ



**ಬಂಟ್ವಾಳ, ಮೇ 15:** ಬೆಂಜನಪದವು ಕೆನರಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಮೂರು ದಿನಗಳ ರಾಜ್ಯಮಟ್ಟದ ತಾಂತ್ರಿಕ ಸಾಂಸ್ಕೃತಿಕ ಉತ್ಸವ ಆಕೃತಿ-2024 ಸ್ಪರ್ಧಾಕೂಟದಲ್ಲಿ ಮಂಗಳೂರು ಕೆನರಾ ಕಾಲೇಜಿನ ತಂಡ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದೆ.

ನಿಟ್ಟೆ ಎಂಜಿನಿಯರಿಂಗ್ ಕಾಲೇಜು ರನ್ನರ್ಸ್ ಅಪ್ ಪ್ರಶಸ್ತಿ ಪಡೆದಿದೆ. ಕಾಲೇಜು ಆಡಳಿತ ಮಂಡಳಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಗೌರವ ಕಾರ್ಯದರ್ಶಿ ಎಂ. ರಂಗನಾಥ ಭಟ್ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಕಾಲೇಜಿನ ಪ್ರಾಂಶುಪಾಲ ಡಾ। ನಾಗೇಶ್ ಎಚ್.ಆರ್., ವಿದ್ಯಾರ್ಥಿ ಕ್ಷೇಮ ಪಾಲನಾ ಡೀನ್ ಡಾ। ಪ್ರಿಯಾ ವಿ. ಪ್ರ್ಯಾಂಕ್, ಆಕೃತಿ ಮುಖ್ಯ ಸಮನ್ವಯಕಾರ ನವೀನ್ ಎ.ಕಲಾಲ್, ವಿದ್ಯಾರ್ಥಿ ಕೌನ್ಸಿಲ್ ಅಧ್ಯಕ್ಷ ವಿಜಯರಾಜ್ ಪೈ ಸಹಿತ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಉದಯವಾಣಿ 17-05-2024.

## ರಾಜ್ಯಮಟ್ಟದ 'ಆಕೃತಿ' ತಾಂತ್ರಿಕ, ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ

# ಕಲಿಕೆಯ ಜತೆಗೆ ಜೀವನ ಕೌಶಲ ಬೆಳಸಿಕೊಳ್ಳಿ: ಅಜಿತ್ ಪೈ



**ಮಂಗಳೂರು, ಮೇ 10:** ಶೈಕ್ಷಣಿಕ ಜೀವನದಲ್ಲಿನ ತಾಂತ್ರಿಕ ಸಾಂಸ್ಕೃತಿಕ ಉತ್ಸವಗಳು ಕಲಿಕೆಯಲ್ಲಿ ಯಶಸ್ಸಿನ ಜತೆಗೆ ಬದುಕಿನಲ್ಲಿ ಉತ್ಸಾಹ ತುಂಬುವ ಅವಕಾಶಗಳಾಗಿವೆ. ತರಗತಿಯ ಜ್ಞಾನದ ಜತೆಗೆ ಸ್ಫೂರ್ತಿ, ಸೃಜನಶೀಲತೆ, ನಾಯಕತ್ವ ಪರಿಶ್ರಮ, ಬದ್ಧತೆಯೇ ಮೊದಲಾದ ಕೌಶಲಗಳ ಮೂಲಕ ವ್ಯಕ್ತಿತ್ವ ರೂಪಿಸುವ ಈ ಅವಕಾಶಗಳ ವೇದಿಕೆಯನ್ನು ಯುವಜನತೆ ಸಮರ್ಥವಾಗಿ ಬಳಸಿಕೊಂಡು ಬೆಳೆಯಬೇಕು ಎಂದು ಡೆಲಿವರಿ ಲಿ. ಸಂಸ್ಥೆಯ ಕಾರ್ಯಾಚರಣೆ ವಿಭಾಗದ ಮುಖ್ಯ ಕಾರ್ಯಾಚರಣಾಧಿಕಾರಿ ಅಜಿತ್ ಪೈ ಹೇಳಿದರು.

ಅವರು ಬೆಂಜನಪದವು ಕೆನರಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಾರ್ಷಿಕೋತ್ಸವದ ಅಂಗವಾಗಿ ಗುರುವಾರ ಆರಂಭಗೊಂಡ ಮೂರು ದಿನಗಳ ರಾಜ್ಯಮಟ್ಟದ 'ಆಕೃತಿ' ತಾಂತ್ರಿಕ, ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಶೈಕ್ಷಣಿಕ, ಬ್ಯಾಂಕಿಂಗ್ ಇನ್ನಿತರ ರಂಗಗಳಲ್ಲಿ ಮೇರು ಸಾಧನೆ ಮಾಡುವಲ್ಲಿ ಅಮ್ಮೆಂಬಳ ಸುಬ್ಬರಾವ್ ಪೈ, ಉಳ್ಳಾಲ ಶ್ರೀನಿವಾಸ ಮಲ್ಯ, ಟಿ.ಎಂ.ಎ. ಪೈ ಹೀಗೆ ಅನೇಕ ಸಾಧಕರ ಕೊಡುಗೆಯಿದೆ. ಈ ಹಾದಿಯಲ್ಲಿ ಇನ್ನಷ್ಟು ಬೆಳೆಯುತ್ತಿರುವ ಕೆನರಾ ಶಿಕ್ಷಣ ಸಂಸ್ಥೆಗಳ ಪ್ರಗತಿಯ ಬಗ್ಗೆ ಹೆಮ್ಮೆ ಅನಿಸಿದೆ ಎಂದವರು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಆಡಳಿತ ಮಂಡಳಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಅಧ್ಯಕ್ಷ ಡಿ. ವಾಸುದೇವ ಕಾಮತ್ ಮಾತನಾಡಿ, ಶಿಕ್ಷಣದ ಜತೆಗೆ ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಮನೋಭಾವ ಬೆಳೆಸಿಕೊಳ್ಳುವಂತೆ ತಿಳಿಸಿದರು.

ಕಾಲೇಜು ಸಂಚಾಲಕ, ಆಡಳಿತ ಮಂಡಳಿ ಕಾರ್ಯದರ್ಶಿ ಎಂ. ರಂಗನಾಥ ಭಟ್ ಮಾತನಾಡಿ, ಕೆನರಾ ಶಿಕ್ಷಣ ಸಂಸ್ಥೆಗಳು ಮೌಲ್ಯಗಳ ಜತೆಗೆ ನಿರಂತರ ಪ್ರಗತಿ, ಸಾಧನೆಯ ಹಾದಿಯಲ್ಲಿ ಮುನ್ನಡೆಯುವ ಕಾರ್ಯ ಯೋಜನೆಯಲ್ಲಿ ಯಶಸ್ಸು ಕಾಣುತ್ತಿರುವುದರ ಹಿಂದೆ ಟೀಂ ವರ್ಕ್ ಕೊಡುಗೆಯಿದೆ ಎಂದರು.

ಪ್ರಾಂಶುಪಾಲ ಡಾ। ನಾಗೇಶ್ ಎಚ್. ಆರ್. ವಾರ್ಷಿಕ ವರದಿ ವಾಚಿಸಿದರು. ಉಪ ಪ್ರಾಂಶುಪಾಲ ಡಾ। ಡೇಮಿಯನ್ ಎ. ಡಿಮೆಲ್ಲೋ, ಅತಿಥಿಯನ್ನು ಪರಿಚಯಿಸಿ ಸ್ವಾಗತಿಸಿದರು. ಪ್ರತಿಭಾನ್ವಿತರು, ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಸಿದ್ಧಾರ್ಥ ಕಿಣಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿ ಕೌನ್ಸಿಲ್ ಅಧ್ಯಕ್ಷ ವಿಜಯರಾಜ್ ಪೈ ವಂದಿಸಿದರು. ವಿದ್ಯಾರ್ಥಿನಿ ಶ್ವೇತಾ ಬಾಳಿಗಾ ಕಾರ್ಯಕ್ರಮ ನಿರೂಪಿಸಿದರು.

ಆಡಳಿತ ಮಂಡಳಿಯ ಜತೆ ಕಾರ್ಯದರ್ಶಿ ಕೆ. ಸುರೇಶ್ ಕಾಮತ್, ಉಪ ಕೋಶಾಧಿಕಾರಿ ಎಂ. ಜಗನ್ನಾಥ ಕಾಮತ್, ಸದಸ್ಯ ಶಿವಾನಂದ ಶೆಣೈ, ಆಡಳಿತ ಕೌನ್ಸಿಲ್ ಸದಸ್ಯ ವಿನಾಯಕ್ ಕಾಮತ್, ಆಕೃತಿ ಉತ್ಸವದ ಪ್ರಧಾನ ಸಮನ್ವಯಕಾರ ನವೀನ್ ಎ. ಕಲಾಲ್, ವಿದ್ಯಾರ್ಥಿ ಕೌನ್ಸಿಲ್ ಅಧ್ಯಕ್ಷ ವಿಜಯರಾಜ್ ಪೈ, ಉಪಾಧ್ಯಕ್ಷೆ ಶಿವಾಲಿ, ಕಾರ್ಯದರ್ಶಿ ಮಹೇಶ್ ಪೈ, ಜತೆ ಕಾರ್ಯದರ್ಶಿ ಆದಿತ್ಯ ಭಕ್ತ, ಸಮನ್ವಯಕಾರರಾದ ವರ್ಷಿಣಿ, ನಾಗರಾಜ್, ರಕ್ಷಾ, ಆದರ್ಶ್, ಸಂಜನಾ, ಮೇಘಾ ಉಪಸ್ಥಿತರಿದ್ದರು.

ಉದಯವಾಣಿ. 11.05.2024.

# CANARA ENGINEERING COLLEGE

Sudheendra Nagara"

BENJANAPADAV-57421

COASTAL BULLETIN

ಬೆಂಜನಪದವು :ಕೆನರಾ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಡಾ.ಪಿ. ದಯಾನಂದ ಪೈ, ಪಿ. ಸತೀಶ್ ಪೈ ಅಡಿಟೋರಿಯಂ ಉದ್ಘಾಟನೆ. ಶಿಕ್ಷಣದಿಂದ ಯುವ ಜನತೆಯಲ್ಲಿ ಜ್ಞಾನ, ದೇಶಾಭಿಮಾನ ಸೇವೆ ಸಂಸ್ಕೃತಿಯ ತುಡಿತ ಮುಖ್ಯ: ಶ್ರೀ ಕಾಶೀಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ



ಬಂಟ್ವಾಳ: ಬದುಕಿನಲ್ಲಿ ಶಿಕ್ಷಣ ಮತ್ತು ಹಣ ಎರಡೂ ಮುಖ್ಯ. ಅವರೆಡರಿಂದ ಮಾತ್ರ ಸಮುದಾಯದ ಪ್ರಗತಿ ಸಾಧ್ಯ ಎಂದು ಅರಿತ ಅಮ್ಮೆಂಬಳ ಸುಬ್ಬರಾವ್ ಪೈ ಕೆನರಾ ಶಿಕ್ಷಣ ಸಂಸ್ಥೆಗಳು ಮತ್ತು ಕೆನರಾ ಬ್ಯಾಂಕ್ ಆರಂಭಿಸುವ ಮೂಲಕ ನಾಡಿಗೆ ಅನನ್ಯ ಕೊಡುಗೆ ನೀಡಿದ 'ಕರ್ನಾಟಕ ರತ್ನ' ಎಂದು ಶ್ರೀ ಕಾಶೀಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ನುಡಿದರು. ಅವರು ಬುಧವಾರ ಪೂರ್ವಾಹ್ನ ಬೆಂಜನಪದವು ಕೆನರಾ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡ ಡಾ.ಪಿ. ದಯಾನಂದ ಪೈ, ಪಿ. ಸತೀಶ್ ಪೈ ಅಡಿಟೋರಿಯಂ ಉದ್ಘಾಟಿಸಿ ಆಶೀರ್ವಚನ ನೀಡಿದರು. ಕೆನರಾ ಶಿಕ್ಷಣ ಸಂಸ್ಥೆಗಳು ಇದೀಗ ಸ್ವಾಯತ್ತೆಯ ಮಟ್ಟಕ್ಕೆ ತಲುಪಿರುವುದು ಶ್ಲಾಘನೀಯ ಎಂದ ಶ್ರೀಗಳವರು ಮುಂದಿನ ದಿನಗಳಲ್ಲಿ ಮೆಡಿಕಲ್ ಕಾಲೇಜು ಆರಂಭಕ್ಕೆ ಪೂರ್ವಭಾವಿಯಾಗಿ ಸುಸಜ್ಜಿತ ಆಸ್ಪತ್ರೆಯನ್ನು ಆರಂಭಿಸುವುದು ಉತ್ತಮ ಎಂದರು. ಶಿಕ್ಷಣದಿಂದ ಜ್ಞಾನ ಸಂಪಾದನೆಯೇ ಮುಖ್ಯವಾಗಬೇಕೇ ಹೊರತು ಅಂಕಗಳಿಕೆಯಲ್ಲ. ಭಾರತೀಯ ಸಂಸ್ಕೃತಿ ಪ್ರೀತಿ, ದೇಶ ಪ್ರೇಮ, ಸೇವೆಯ ತುಡಿತದೊಂದಿಗೆ ಯುವ ಸಮೂಹ ದೇಶಾಭಿಮಾನದ ಸ್ಥಂಭಗಳಾಗಬೇಕಿದೆ ಎಂದವರು ಅಭಿಪ್ರಾಯಪಟ್ಟರು.

ಮಂಗಳೂರು ದಕ್ಷಿಣ ಶಾಸಕ ಡಿ.ವೇದವ್ಯಾಸ ಕಾಮತ್ ಮಾತನಾಡಿ ಕೆನರಾ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಮೂಲಕ ಬಹಳಷ್ಟು ಅವಕಾಶಗಳ ಬದುಕನ್ನು ಯುವಜನತೆಗೆ ಒದಗಿಸುತ್ತಿವೆ. ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಸಂಸ್ಥೆಯ ಚಿಂತನೆಯಿಂದ

ಕೋಸ್ಟಲ್ ಬುಲೆಟಿನ್ : 23.01.2025

ಅಧ್ಭುತ ಪ್ರಗತಿ ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಕೆನರಾ ಶಿಕ್ಷಣ ಸಮೂಹ ಸಂಸ್ಥೆಗಳು ಮೆಡಿಕಲ್, ಕಾನೂನು ಕಾಲೇಜುಗಳನ್ನೂ ಆರಂಭಿಸಿದರೆ ಅದರಿಂದ ಕರಾವಳಿಯ ಜನತೆಗೆ ಲಾಭವಾಗಲಿದೆ ಎಂದರು ಶ್ರೀಮತಿ ಮೋಹಿನಿ ಡಿ. ಪೈ, ಪಿ.ಸತೀಶ್ ಪೈ, ಪಿ. ಸಬಿತಾ ಎಸ್. ಪೈ , ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಡಿ.ವಾಸುದೇವ ಕಾಮತ್ , ಉಪಾಧ್ಯಕ್ಷ ಎಸ್ ಸುರೇಶ್ ಕಾಮತ್ , ಗೌರವ ಕಾರ್ಯದರ್ಶಿ ಎಂ. ರಂಗನಾಥ ಶೆಣೈ, ಕೋಶಾಧಿಕಾರಿ ವಾಮನ್ ಕಾಮತ್ ಸಹಿತ ಆಡಳಿತ ಮಂಡಳಿಯ ಸದಸ್ಯರು, ಮಾಜಿ ಸದಸ್ಯರು, ಕಾಲೇಜು ಆಡಳಿತ ಕೌನ್ಸಿಲ್ಸದಸ್ಯರು, ಸಹ ಸಂಸ್ಥೆಗಳ ಮುಖ್ಯಸ್ಥರು, ಕಾಲೇಜು ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್ , ಡೀನ್ಸ್, ವಿಭಾಗ ಮುಖ್ಯಸ್ಥರುಗಳ ಸಹಿತ ಬೋಧಕ, ಬೋಧಕೇತರರು ಉಪಸ್ಥಿತರಿದ್ದರು.ಸಹ ಕೋಶಾಧಿಕಾರಿ ಎಂ. ಜಗನ್ನಾಥ ಕಾಮತ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು.

ಮಂಗಳೂರು ಮೊಕ್ಕಾಂನಿಂದ ಚಿತ್ತೈಸಿದ ಶ್ರೀಗಳವರನ್ನು ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಆಡಳಿತ ಮಂಡಳಿ ವತಿಯಿಂದ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಪರಮ ಗುರು ಸುಧೀಂದ್ರ ತೀರ್ಥ ಸ್ವಾಮೀಜಿಯವರ ಜನ್ಮ ಶತಾಬ್ದಿ ಅಂಗವಾಗಿ ನಡೆದಿರುವ ಪಾದುಕಾ ದಿಗ್ವಿಜಯ ಯಾತ್ರೆಯನ್ನೂ ಸ್ವಾಗತಿಸಲಾಯಿತು. ವೈದಿಕ ಕಾರ್ಯಕ್ರಮಗಳು, ಶ್ರೀಗಳವರಿಂದ ದ್ವಾರ ಪೂಜೆ, ಲಕ್ಷ್ಮೀ ಪೂಜೆ, ಫಲಕ ಅನಾವರಣ, ದೀಪ ಪ್ರಜ್ವಲನ, ಸಭಾ ಭವನದ ದಾನಿಗಳು, ನಿರ್ಮಾಣಕ್ಕೆ ಸಹಕರಿಸಿದವರನ್ನು ಗೌರವಿಸಿದರು. ಗುರು ಸುಧೀಂದ್ರ ತೀರ್ಥ ಸ್ವಾಮೀಜಿಯವರ ಜನ್ಮ ಶತಾಬ್ದಿ ಅಂಗವಾಗಿ ಶ್ರೀ ಸುಧೀಂದ್ರ ಫಲೋದ್ಯಾನ ನಿರ್ಮಾಣಕ್ಕೆ ಸಸಿಗಳನ್ನು ನೆಡುವ ಮೂಲಕ ಚಾಲನೆ ನೀಡಿದರು. ಬಳಿಕ ಮಂಗಳೂರಿನ ಶ್ರೀ ವೀರ ವೆಂಕಟೇಶ ಭಜನಾ ಮಂಡಳಿಯವರಿಂದ ಸಂಕೀರ್ತನಾ ಸೇವೆ ನಡೆಯಿತು.

ಕೆನರಾ ಶಿಕ್ಷಣ ಸಮೂಹ ಮೆಡಿಕಲ್ ಕಾಲೇಜು ಆರಂಭಿಸಲು ಕೋಟಿಗಳ ವಾಗ್ದಾನ!

ಶಿಕ್ಷಣ ರಂಗದಲ್ಲಿ ಕೆನರಾ ಶಿಕ್ಷಣ ಸಂಸ್ಥೆಗಳಿಗೆ 134 ವರ್ಷಗಳ ಹಿರಿಮೆಯಿದೆ. ಕೆನರಾ ಬ್ಯಾಂಕು ಅಂತರಾಷ್ಟ್ರೀಯ ಮನ್ನಣೆ ಪಡೆದು ಮುನ್ನಡೆಯುತ್ತಿದೆ. ಶಿಕ್ಷಣರಂಗದಲ್ಲಿ ಕೆನರಾ ಇನ್ನಷ್ಟು ಬೆಳೆಯಬೇಕು. ವಿಶೇಷವಾಗಿ ಮೆಡಿಕಲ್ ಮತ್ತು ಲಾ ಕಾಲೇಜುಗಳನ್ನು ಆರಂಭಿಸುವ ನಿಟ್ಟಿನಲ್ಲಿ ಶೀಘ್ರ ನಿರ್ಧಾರ ಕೈಗೊಳ್ಳಬೇಕಿದೆ. ಮೆಡಿಕಲ್ ಕಾಲೇಜು ಶಿಕ್ಷಣಕ್ಕೆ ಮೂಲ ಭೂತ ಕಟ್ಟಡ, ಆಸ್ಪತ್ರೆ, ಹೀಗೆ ಬಹಳಷ್ಟು ಆರ್ಥಿಕ ಸವಾಲುಗಳಿವೆ. ಆದರೆ ನನ್ನ ಕೆನರಾ ಶಿಕ್ಷಣ ಸಂಸ್ಥೆ ಮೆಡಿಕಲ್ ಕಾಲೇಜು ಆರಂಭಿಸಲು ನಿರ್ಧರಿಸಿದರೆ ಮೂಲ ಸೌಲಭ್ಯಗಳ ಅಗತ್ಯ ಪೂರೈಸಲು 50 ಕೋಟಿ ರೂ ಕೊಡುಗೆ ನೀಡುವುದಾಗಿ ದಾನಿ ಡಾ. ಪಿ. ದಯಾನಂದ ಪೈ ಅಭಿಮಾನದಿಂದ ಪ್ರಕಟಿಸಿದರು. ಒಂದೆರಡು ವರ್ಷಗಳ ಒಳಗೆ ತ್ವರಿತವಾಗಿ ಈ ಕುರಿತ ಪ್ರಗತಿಯಾಗಲಿ ಎಂದು ಹಾರೈಸಿದ ಅವರು ಇದರಿಂದ ಕರಾವಳಿ ಕರ್ನಾಟಕದ ಜನತೆಗೆ ಲಾಭವಾಗಲಿದೆ ಎಂದರು. ಕೆನರಾ ಹೈಸ್ಕೂಲ್ ನನ್ನ ಬದುಕು ರೂಪಿಸಿದೆ. ಇಲ್ಲಿ ನನಗೆ ತೀರಿಸಲಾಗದ ಋಣವಿದೆ ಎಂದವರು ಭಾವುಕರಾಗಿ ನುಡಿದರು.

ಕೆನರಾ ಶಿಕ್ಷಣ ಸಂಸ್ಥೆಯ ಹಳೆ ವಿದ್ಯಾರ್ಥಿಯಾಗಿ ಸಾಧಕ ಉದ್ಯಮಿಯಾಗಿ ನಿರಂತರ ಬೆಳೆದು ದಯಾನಂದ ಪೈ, ಸತೀಶ್ ಪೈ ಸಹೋದರರು ಕೆನರಾ ಶಿಕ್ಷಣ ಸಂಸ್ಥೆಗಳಿಗೆ ಸದಾ ಉದಾರ ದೇಣಿಗೆಗಳನ್ನು ನೀಡುತ್ತಲೇ ಬಂದಿದ್ದಾರೆ. ಈ ಬಾರಿ ನೂತನ ಆಡಿಟೋರಿಯಂ, ಇನ್ನೀಗ ಮೆಡಿಕಲ್ ಕಾಲೇಜಿಗೆ ಅಗತ್ಯವಿರುವ ಆಸ್ಪತ್ರೆ, ಕಟ್ಟಡ ನಿರ್ಮಾಣಕ್ಕೆ ಮುಂದಾಗುವುದಾದರೆ 50ಕೋಟಿ ರೂ ಭಾರೀ ಮೊತ್ತದ ದೇಣಿಗೆ ಘೋಷಿಸಿರುವುದು ಗಮನಾರ್ಹವಾಗಿದೆ.

# CANARA ENGINEERING COLLEGE

Sudheendra Nagara"

BENJANAPADAV-57421

COASTAL BULLETIN

## ಬೆಂಜನಪದವು :ಕೆನರಾ ಇಂಜಿನಿಯರಿಂಗ್ ಕಾಲೇಜು ಹಾಗೂ ಕರುನಾಡು ಟೆಕ್ನಾಲಜೀಸ್ ಪ್ರೈ.ಲಿ ನಡುವೆ ಶೈಕ್ಷಣಿಕ ಒಪ್ಪಂದ.




ಬಂಟ್ವಾಳ :ಕೆನರಾ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇನ್ನರೇಶನ್ ಸೈನ್ಸ್ ವಿಭಾಗವು ಕರುನಾಡು ಟೆಕ್ನಾಲಜೀಸ್ ಪ್ರೈ.ಲಿ ಬೆಂಗಳೂರು ಇದರ ನಡುವೆ ಶೈಕ್ಷಣಿಕ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಮಾಡಲಾಗಿದೆ.

ಶೈಕ್ಷಣಿಕ ಮತ್ತು ಕೈಗಾರಿಕೆಗೆ ಸಂಬಂಧಿಸಿದಂತೆ ಸಹಭಾಗಿತ್ವವನ್ನು ವೃದ್ಧಿಸಲು ಈ ಒಪ್ಪಂದ ಸಹಕಾರಿಯಾಗಲಿದೆ. ಈ ಒಪ್ಪಂದದಂತೆ ಬೋಧಕರ ಪರಿಣತಿ, ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿ ಕೈಗಾರಿಕೆಗೆ ಸಂಬಂಧಿಸಿದಂತೆ ಪಠ್ಯವಸ್ತು ರೂಪಿಸುವುದು, ಜಂಟಿ ಸಂಶೋಧನಾ ಚಟುವಟಿಕೆಗಳು, ಜ್ಞಾನ ವಿನಿಮಯ, ಇಂಟರ್ ಶಿಪ್, ಉದ್ಯಮಶೀಲತಾ ಚಟುವಟಿಕೆಗಳು, ಬೋಧಕರು ಮತ್ತು ವಿದ್ಯಾರ್ಥಿಗಳಿಗೆ ಸಮಕಾಲೀನ ತಂತ್ರಜ್ಞಾನದ ಪ್ರಾಯೋಗಿಕ ಅನ್ವಯ, ತ್ವರಿತವಾಗಿ ಬದಲಾಗುತ್ತಿರುವ ತಾಂತ್ರಿಕ ಅಗತ್ಯಗಳಿಗೆ ಸ್ಪಂದಿಸುವ ವೇದಿಕೆ ಇದಾಗಲಿದೆ.

ಕೋಸ್ಟಲ್ ಬುಲೆಟಿನ್: 19.01.2025

# CANAR ENGINEERING COLLEGE

"Sudheendra Nagara"

BENJANAPADAV-57421

COASTAL BULLETIN

## ಬೆಂಜನಪದವು :ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ "ಆಚಾರ್ಯ" ಬೋಧಕರ ಅಭಿವೃದ್ಧಿ ಕಾರ್ಯಾಗಾರ.



ಮಂಗಳೂರು: ಶಿಕ್ಷಣದಲ್ಲಿ ನಾವಿನ್ಯತೆ ಮತ್ತು ಉದ್ಯಮಶೀಲತೆ ಕುರಿತಂತೆ ಬೊಧಕರ ಕೌಶಲ ಅಭಿವೃದ್ಧಿ ಕುರಿತ ಮೂರು ದಿನಗಳ "ಆಚಾರ್ಯ" ಕಾರ್ಯಾಗಾರ ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರಗಿತು.

ಅನಂತಪುರ ಶ್ರೀ ಕೃಷ್ಣದೇವರಾಯ ವಿವಿಯ ಆಟಲ್ ಇನ್ಕ್ಯುಬೇಶನ್ ಸೆಂಟರ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಸಿ.ಚಂದ್ರ ಮೌಳಿ, ಬೆಂಗಳೂರು ಬಯೋ ಇನ್ನೋವೇಶನ್ ಸೆಂಟರ್ನ ಇನ್ಕ್ಯುಬೇಶನ್ ಆಪರೇಶನ್ ವಿಭಾಗ ಪ್ರಬಂಧಕಿ ಕು.ಶಹೀನ್ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದರು.ಕಾಲೇಜಿನ ಪ್ರಾಚಾರ್ಯ ಡಾ. ನಾಗೇಶ್ ಹೆಚ್. ಆರ್. ರಿಸರ್ಚ್ ಡೀನ್, ಇನ್ಕ್ಯುಬೇಶನ್ ಸೆಂಟರ್ನ ಮುಖ್ಯಸ್ಥ ಡಾ. ಉದಯ ಕುಮಾರ್ ಕೆ. ಶೆಣೈ, ಡೀನ್ ಎಕ್ರೆಡಿಟೇಶನ್ ಡಾ. ವೆಂಕಟೇಶ್ ಎನ್, ಉಪಸ್ಥಿತರಿದ್ದರು.

ಡಿಸೈನ್ ತಿಂಕಿಂಗ್, ಸ್ಟಾಟ್ ಅಪ್ ಇಕೋ ಸಿಸ್ಟಮ್, ಇನ್ಕ್ಯುಬೇಟರ್ ಮ್ಯಾನೇಜ್ ಮೆಂಟ್, ಉದ್ಯಮಶೀಲತಾ ವಿಧಾನಗಳ ಕುರಿತಂತೆ ಕಾರ್ಯಾಗಾರದಲ್ಲಿ ಒಳನೋಟಗಳ ಕುರಿತ ಚರ್ಚೆ, ಪ್ರಾಯೋಗಿಕ ಅನುಭವ, ಶೈಕ್ಷಣಿಕ ಇನ್ಕ್ಯುಬೇಶನ್ ಸೆಂಟರ್ ಗಳ ನಿರ್ವಹಣೆ ಕುರಿತ ವಿಷಯಗಳ ವಿಶ್ಲೇಷಣೆ, ಬೋಧಕರು ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳನ್ನು ಸ್ಫೂರ್ತಿಯುತವಾಗಿ ಹೊಸತನದ ಸವಾಲುಗಳನ್ನೆದುರಿಸಿ ಅನ್ವೇಷಣಾ ಮನೋಭಾವದಿಂದ ಮುನ್ನಡೆಯುವ ಸವಾಲುಗಳ ಕುರಿತಂತೆ ಮಾರ್ಗದರ್ಶನ ನೀಡಲಾಯಿತು.

ಕೋಸ್ಟಲ್ ಬುಲೆಟಿನ್: 15·01·2025

# CANARA ENGINEERING COLLEGE

Sudheendra Nagara”

BENJANAPADAV-57421

COASTAL BULLETIN

## ಬೆಂಜನಪದವು :ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದಯೋನ್ಮುಖ ತಂತ್ರಜ್ಞಾನ ಕುರಿತ ಬೋಧನಾ ಕಾರ್ಯಾಗಾರ.



ಬಂಟ್ವಾಳ : ಕೆನರಾ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ ಮತ್ತು ಇಸ್ಫರ್ಮೇಶನ್ ಸೈನ್ಸ್ ವಿಭಾಗದ ಸಹಯೋಗದಲ್ಲಿ ಭವಿಷ್ಯದ ತಂತ್ರಜ್ಞಾನ,ಮೂಲಭೂತಗಳು, ಐಒಟಿ, ಎಂಎಲ್. ಸೈಬರ್ ಸೆಕ್ಯೂರಿಟಿ, ಬ್ಲಾಕ್ ಚೈನ್ ವಿಷಯದಲ್ಲಿ ಉದಯೋನ್ಮುಖ ತಂತ್ರಜ್ಞಾನ ಕುರಿತ ಎರಡು ದಿನಗಳ ಬೋಧನಾ ಕಾರ್ಯಾಗಾರವು ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜ.11ರಂದು ಶನಿವಾರ ಆರಂಭಗೊಂಡಿತು

ಕರುನಾಡು ಟೆಕ್ನಾಲಜಿಯ ಸಿಇಒ ಮಹೇಶ್ ಡೆಜಿನಲ್, ಸಿಟಿಓ ಮಹೇಶ್ ಎನ್, ನಿಟ್ಟೆಯ ಪ್ರಾಧ್ಯಾಪಕರಾದ ಡಾ ರೋಶನ್ ಫೆರ್ನಾಂಡಿಸ್, ಅಭಿಷೇಕ್ ಎಸ್ ರಾವ್, ಕು. ತನ್ಸೀಲಾ ನರ್ಗಿಸ್ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕಾಲೇಜಿನ ಉಪ ಪ್ರಾಚಾರ್ಯ ಡಾ. ಡೇಮಿಯನ್ ಡಿ ಮೆಲ್ಲೋ, ಕಂಪ್ಯೂಟರ್ ಸೈನ್ ವಿಭಾಗ ಮುಖ್ಯಸ್ಥ ಡಾ. ಕಾರ್ತಿಕ್ ಪೈ ಬಿ. ಇನ್ಫರ್ಮೇಶನ್ ಸೈನ್ಸ್ ವಿಭಾಗ ಮುಖ್ಯಸ್ಥ ಡಾ. ಹೆಚ್. ಮನೋಜ್ ಟಿ. ಗಡಿಯಾರ್, ಕಾರ್ಯಕ್ರಮದ ಸಂಯೋಜಕ ರಾಜ್ಗೋಪಾಲ್ ಕೆ.ಟಿ. ಉಪಸ್ಥಿತರಿದ್ದರು.

ಕಾರ್ಯಾಗಾರವು ಬೋಧಕರಿಗೆ ಐಒಟಿ, ಎಂಎಲ್. ಸೈಬರ್ ಸೆಕ್ಯೂರಿಟಿ, ಬ್ಲಾಕ್ ಚೈನ್ ಮೂಲಭೂತ ವಿಷಯದಲ್ಲಿ ಉದಯೋನ್ಮುಖ ತಂತ್ರಜ್ಞಾನ ಕುರಿತಂತೆ ಮಾಹಿತಿ, ಜ್ಞಾನಾನುಭವ ಒದಗಿಸಲಿದೆ.

ಕೋಸ್ಟಲ್ ಬುಲೆಟಿನ್ : 13.01.2025

# CANARA ENGINEERING COLLEGE

Sudheendra Nagara"

BENJANAPADAV-57421

COASTAL BULLETIN

## ಬೆಂಜನಪದವು: ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಡಿಫ್ ಮೆಟ್ರೋಪಾಲಿಟಿನ್ ವಿವಿ ತಜ್ಞರ ಉಪನ್ಯಾಸ. ಸೈಬರ್ ಸೆಕ್ಯೂರಿಟಿ ಮತ್ತು ಕೃತಕ ಬುದ್ಧಿಮತ್ತೆ ಕುರಿತು ಅಂತಾರಾಷ್ಟ್ರೀಯ ಸಹಭಾಗಿತ್ವ.




ಮಂಗಳೂರು: ಕೆನರಾ ಇಂಜಿನಿಯರಿಂಗ್ ಕಾಲೇಜು ಮತ್ತು ಮಂಗಳೂರು ವಿವಿಯ ರೆಸ್ಪಾನ್ಸಿಬಲ್ ಎಐ ಕ್ಲಸ್ಟರ್ ಇನ್ ಹೈಯರ್ ಎಜುಕೇಶನ್ ಆಂಡ್ ಕಾರ್ಡಿಫ್ ಮೆಟ್ರೋಪಾಲಿಟನ್ ಯೂನಿವರ್ಸಿಟಿ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಸಹಭಾಗಿತ್ವದ ಅಂಗವಾಗಿ ಸೈಬರ್ ಸೆಕ್ಯೂರಿಟಿ ಮತ್ತು ಕೃತಕ ಬುದ್ಧಿಮತ್ತೆ ಕುರಿತಂತೆ ಕಾರ್ಡಿಫ್ ಮೆಟ್ರೋಪಾಲಿಟನ್ ವಿವಿ ತಜ್ಞರ ಉಪನ್ಯಾಸ ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ನಡೆಯಿತು.

ಕಾರ್ಡಿಫ್ ಮೆಟ್ರೋಪಾಲಿಟನ್ ವಿವಿಯ ಹಿರಿಯ ಉಪನ್ಯಾಸಕಿ ಡಾ. ಲಿಖ್ವಾ ನವಾಫ್ ಮಾಹಿತಿ ಭದ್ರತೆ, ಸೈಬರ್ ಸುರಕ್ಷತೆಯ ಆಯಾಮಗಳು, ಮತ್ತು ಕೃತಕ ಬುದ್ಧಿಮತ್ತೆಯ ಕುರಿತು ಮಾತನಾಡಿ ಹೆಚ್ಚುತ್ತಿರುವ ಸೈಬರ್ ಬೆದರಿಕೆಗಳ ವಿರುದ್ಧ ರೋಬಸ್ಟ್ ಸಿಸ್ಟಮ್ ಗಳನ್ನು ರೂಪಿಸುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಿದರು.

ಇನ್ನೋರ್ವ ಉಪನ್ಯಾಸಕಿ ಡಾ. ವಿಭೂಷಿಣಿ ಬೆಂಟೋತಹೆವಾ ಮಾಹಿತಿ ಭದ್ರತೆ ಕುರಿತು ತಮ್ಮ ಜ್ಞಾನವನ್ನು ಹಂಚಿಕೊಂಡರು. ಜಾಗತಿಕ ಸಂಪರ್ಕಗಳು ವೃದ್ಧಿಸುತ್ತಿರುವ ಹಿನ್ನೆಲೆಯಲ್ಲಿ ಡಿಜಿಟಲ್ ಸಂಪತ್ತಿನ ರಕ್ಷಣೆಯ ಮಹತ್ವದ ಕುರಿತು ಅವರು ಒಳನೋಟ ನೀಡಿದರು.

ಮಂಗಳೂರು ವಿವಿಯ ಪ್ರೊ. ಎ.ಎಂ.ಖಾನ್, ಕಾಲೇಜಿನ ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್, ರಿಸರ್ಚ್ ಆಂಡ್ ಡೆವಲಪ್ಮೆಂಟ್ ಡೀನ್ ಡಾ. ಉದಯ್ ಕುಮಾರ್ ಶೆಣೈ , ಕಾರ್ಯಕ್ರಮ ಸಂಯೋಜಕರಾದ ಡಾ. ಪ್ರಹಾಸ್ ಅಮೀನ್, ಡಾ. ಹೆಚ್. ಮನೋಜ್ ಗಡಿಯಾರ್ ಮತ್ತಿತತರು ಉಪಸ್ಥಿತರಿದ್ದರು. ಮಂಗಳೂರು ವಿವಿಯ ರೆಸ್ಪಾನ್ಸಿಬಲ್ ಎಐ ಕ್ಲಸ್ಟರ್ ಹಾಗೂ ಕಾಲೇಜಿನ ಸಹಭಾಗಿತ್ವದಲ್ಲಿ ಉಪಯುಕ್ತ ತಾಂತ್ರಿಕ ವಿಚಾರಗಳ ಸರಣಿ ಉಪಸ್ಯಾಸದ ಅಂಗವಾಗಿ ಈ ಕಾರ್ಯಕ್ರಮ ನಡೆಯಿತು.

ಕೋಸ್ಟಲ್ ಬುಲೆಟಿನ್ 21/12/2024

**CANARA ENGINEERING COLLEGE**

"Sudheendra Nagara"

BENJANAPADAV-57421

COASTAL BULLETIN


# ಬೆಂಜನಪದವು :ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇನ್ಫೋವೇಶನ್ 2024.



ಮಂಗಳೂರು: ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇನ್ಫರ್ಮೇಶನ್ ಸಯನ್ಸ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ತಾಂತ್ರಿಕ ಉತ್ಸಾಹಿಗಳ ಸಂಪರ್ಕದಿಂದ ನೂತನ ಆವಿಷ್ಕಾರಗಳ ಕುರಿತು ಪ್ರೇರಿತರಾಗುವ ಇನ್ಫೋವೇಶನ್ 2024 ತಾಂತ್ರಿಕ ಕಾರ್ಯಕ್ರಮ ಐಐಸಿ, ಗೀಕ್ ಹಬ್, ಇಂಡಸ್ಟ್ರಿ ಕನೆಕ್ಟ್ ಕ್ಲಬ್ ಸಹಯೋಗದಲ್ಲಿ ನಡೆಯಿತು.ಇಂಜಿನಿಯರಿಂಗ್ ನ ವಿವಿಧ ವಿಭಾಗದ ತಾಂತ್ರಿಕ ವಿದ್ಯಾರ್ಥಿಗಳು ಕಲೆತು ಹೊಸತನದ ಆವಿಷ್ಕಾರದ ಉತ್ಸಾಹಕ್ಕೆ ವೇದಿಕೆಯಾಗಿ ಈ ಕಾರ್ಯಕ್ರಮ ಜರಗಿತು.

ರಿಸರ್ಚ್ ಆಂಡ್ ಡೆವಲಪ್ಮೆಂಟ್ ಡೀನ್ ಡಾ.ಉದಯ್ ಕುಮಾರ್ ಶೆಣೈ ತಾಂತ್ರಿಕ ಜಾಗೃತಿ ಕುರಿತು ವಿವರಿಸಿದರು. ದೀಪ್ತಿ ಪ್ರಭು ಪ್ಲೇಸ್ ಮೆಂಟ್ ಒಳನೋಟಗಳು,ಬೆಳವಣಿಗೆಗಳ ಕುರಿತು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್. ಉಪ ಪ್ರಾಚಾರ್ಯ ಡಾ. ಡೇಮಿಯನ್ ಆಂಟನಿ ಡಿ ಮೆಲ್ಲೋ, ಎಕ್ರೆಡಿಟೇಶನ್ ಡೀನ್ ಡಾ. ಎನ್. ವೆಂಕಟೇಶ್, ಐ ಎಸ್ ವಿಭಾಗ ಮುಖ್ಯಸ್ಥ ಡಾ ಹೆಚ್. ಮನೋಜ್ ಗಡಿಯಾರ್ ಸಕಾಲಿಕ ಮಾತುಗಳನ್ನಾಡಿದರು.

ಬ್ಲೈಂಡ್ ಕೋಡಿಂಗ್, ಎರರ್ ಎಕ್ಸಪೆಡಿಶನ್, ಯುಐ ಬ್ಯಾಟಲ್ ಮೊದಲಾದ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗಿಯಾದರು.ಇನ್ಫರ್ಮೇಶನ್ ಸಯನ್ಸ್ ಅಂತಿಮ ವರ್ಷದ ವಿದ್ಯಾರ್ಥಿಗಳ ನಾಯಕತ್ವದಲ್ಲಿ ಬೋಧಕರಾದ ಗೀತಾಲಕ್ಷ್ಮೀ, ಸುಷ್ಮಾ ಎಂ.ಡಿ, ಶಿಲ್ಪಾ ಬಿ. ರಂಗನಾಥ್ ಕೆ. ಸಹಕಾರ ನೀಡಿದರು.

# CANARA ENGINEERING COLLEGE

"Sudheendra Nagara"
BENJANAPADAV-57421

COASTAL BULLETIN

## ಬೆಂಜನಪದವು: ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಶಿನ್ ಲರ್ನಿಂಗ್ ಕಾರ್ಯಾಗಾರ.



ಮಂಗಳೂರು : ಕೆನರಾ ಇಂಜಿನಿಯರಿಂಗ್ ಕಾಲೇಜಿನ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಮತ್ತು ಮೆಶಿನ್ ಲರ್ನಿಂಗ್ ವಿಭಾಗದ ವತಿಯಿಂದ ಇಂಟರ್ನೆಟ್ ಆಫ್ ಥಿಂಗ್ಸ್ - ಫ್ರಾಮ್ ಪ್ರಾಬ್ಲೆಮ್ಸ್ ಟು ಪ್ರೂಫ್ ಆಫ್ ಕಾನ್ಸೆಪ್ಟ್ ' ಕುರಿತ ಮೂರು ದಿನಗಳ ಕಾರ್ಯಾಗಾರ ಅ 23 ಬುಧವಾರ ಉದ್ಘಾಟನೆಗೊಂಡಿತು. ಕಾಕುಂಜೆ ಸಾಫ್ಟ್ವೇರ್ ಪ್ರೈ.ಲಿ. ಇದರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಆಡಳಿತ ನಿರ್ದೇಶಕ ಗೋಪಾಲ ಕೃಷ್ಣ ಭಟ್ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಸಮಾಜಮುಖಿ ಸಮಸ್ಯೆಗಳನ್ನು ಗುರುತಿಸಿ ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಐಓಟಿ, ಮೆಶಿನ್ ಲರ್ನಿಂಗ್ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಉದ್ದೇಶದಿಂದ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ.ನಾಗೇಶ್ ಹೆಚ್. ಆರ್, ಅಕ್ರೆಡಿಟೇಶನ್ ವಿಭಾಗ ಡೀನ್ ಡಾ. ವೆಂಕಟೇಶ್ ಎನ್, ಎಐಎಂಎಲ್ ವಿಭಾಗ ಮುಖ್ಯಸ್ಥ ಡಾ. ಬಸಪ್ಪ ಬಿ.ಕೊಡಡ, ಸಹ ಪ್ರಾಧ್ಯಾಪಕಿ ಕಣ್ಮಣಿ ಮತ್ತಿತರರು ಉಪಸ್ಥಿತರಿದ್ದರು.

ಕೋಸ್ಟಲ್ ಬುಲೆಟಿನ್ : 23.10.2024

# CANARA ENGINEERING COLLEGE

"Sudheendra Nagara"

BENJANAPADAV-57421

COASTAL BULLETIN

## ಬೆಂಜನಪದವು:ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇನ್ಕ್ಯುಬೇಶನ್ ಸೆಂಟರ್ ಒಪ್ಪಂದ.

## ವಿನೂತನ ಸ್ಟಾರ್ಟಪ್ ಚಿಂತನೆಗಳನ್ನು ಅಭಿವೃದ್ಧಿ ಪಡಿಸಿ ಯಶಸ್ಸಿನ ಉತ್ಪನ್ನವಾಗಿಸುವ ಗುರಿ.



ಮಂಗಳೂರು : ಇಲ್ಲಿನ ಕೆನರಾ ಇಂಜಿನಿಯರಿಂಗ್ ಕಾಲೇಜು ನೂತನ ಇನ್ಕ್ಯುಬೇಶನ್ ಸೆಂಟರ್ ಹಾಗೂ ಸ್ಟಾರ್ಟ್‌ಅಪ್ ಇಕೋಸಿಸ್ಟಮ್ ವೃದ್ಧಿಗಾಗಿ ಸೆಕ್ಷನ್ ಇನ್ಫಿನಿಟಿ 8 ಫೌಂಡೇಶನ್ ಪರಸ್ಪರ ಒಪ್ಪಂದ ಮಾಡಿಕೊಂಡಿವೆ.ಕೆನರಾ ಶಿಕ್ಷಣ ಸಂಸ್ಥೆಗಳ ಸ್ಥಾಪಕ ಅಮ್ಮೆಂಬಳ ಸುಬ್ಬರಾವ್ ಪೈ ಅವರ ಜನ್ಮದಿನಾಚರಣೆಯ ಸುದಿನ ಅವರ ಉದ್ಯಮಶೀಲತೆಯ ಪರಂಪರೆಯನ್ನು ಮುಂದಿನ ಯುವ ಪೀಳಿಗೆಗಾಗಿ ಮುನ್ನಡೆಸುವ ಸಂಕಲ್ಪದೊಂದಿಗೆ ಅ19ರ ಮಂಗಳವಾರ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

ಕೆನರಾ ಸಿಬಿಎಸ್ಸಿ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಜರಗಿದ ಈ ಸಮಾರಂಭದಲ್ಲಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಕಾರ್ಯದರ್ಶಿ ಎಂ.ರಂಗನಾಥ ಭಟ್, ಜತೆ ಕಾರ್ಯದರ್ಶಿ ಟಿ. ಗೋಪಾಲಕೃಷ್ಣ ಶೆಣೈ, ಕೆನರಾ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್. ಸೆಕ್ಷನ್ ಇನ್ಫಿನಿಟಿ 8 ಫೌಂಡೇಶನ್ ನಿರ್ದೇಶಕ ವಿಶ್ವಾಸ್ ಉಚ್ಚಿಲ ಶಿಶಿರ್, ಸಿಎಫ್ ಒ ಪ್ರೇಕ್ಷಾ ತೇಜ್, ಕಾಲೇಜಿನ ಬೋಧಕರು ಮತ್ತು ಆಡಳಿತ ಪ್ರಮುಖರು ಉಪಸ್ಥಿತರಿದ್ದರು.

ಈ ಒಪ್ಪಂದದಂತೆ ಇನ್ಕ್ಯುಬೇಶನ್ ಸೆಂಟರ್ ಮೂಲಕ ಕಾಲೇಜಿನ ಬೋಧಕರು, ವಿದ್ಯಾರ್ಥಿಗಳ , ಸ್ಥಳೀಯ ಸಮುದಾಯದ ಸಬಲೀಕರಣ, ವಿನೂತನ ಸ್ಟಾರ್ಟಪ್ ಚಿಂತನೆಗಳನ್ನು ಅಭಿವೃದ್ಧಿ ಪಡಿಸಿ ಯಶಸ್ಸಿನ ಉತ್ಪನ್ನವಾಗಿಸುವ ಗುರಿ ಹೊಂದಲಾಗಿದೆ. ಸೆಕ್ಷನ್ ಇನ್ಫಿನಿಟಿ 8 ಫೌಂಡೇಶನ್ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳನ್ನು ಉದ್ಯಮಿಗಳನ್ನಾಗಿಸುವ, ಉದ್ಯೋಗದಾತರನ್ನಾಗಿಸುವ , ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುವ ಯೋಜನೆ ಇದಾಗಿದೆ. ಹೊಸ ಸ್ಟಾರ್ಟಪ್ ಗಳಿಗೆ ಸರಕಾರದ ಅನುದಾನ, ಸಿಎಸ್.ಆರ್ ನೆರವು ಸೇರಿದಂತೆ ಆರ್ಥಿಕ ಮೂಲಗಳನ್ನು ಸಂಚಯಿಸಿ ಅವುಗಳನ್ನು ಸ್ವಾವಲಂಬಿ, ಉತ್ಪಾದಕ ಮಾದರಿಯನ್ನಾಗಿಸುವ ಗುರಿ ಹೊಂದಲಾಗಿದೆ.ಈ ದಶಕದಲ್ಲಿ ಯುವ ಇಂಜಿನಿಯರಿಂಗ್ ಪದವೀಧರರು ಬರೇ ತಾಂತ್ರಿಕ ಕೌಶಲ ಹೊಂದಿದ್ದರೆ ಸಾಲದು, ಸಮಾಜದ ಸವಾಲನ್ನೆದುರಿಸಿ ಉದ್ಯಮ ಶೀಲ ಮನೋಭಾವ ಹೊಂದಿರಬೇಕು. ಈ ಒಪ್ಪಂದವು ಪ್ರತಿಭಾನ್ವಿತರ ಸ್ಟಾರ್ಟಪ್ ಯಶಸ್ಸಿನ ಪಯಣದಲ್ಲಿ ವೇಗ ನೀಡಲಿದೆ ಎಂದು ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್. ಹೇಳಿದರು. ಈ ಒಪ್ಪಂದವು ವಿದ್ಯಾರ್ಥಿಗಳನ್ನು ನಾವೀನ್ಯತೆಯ ಜತೆಗೆ ಉದ್ಯಮ ಸ್ನೇಹಿ  ಉದ್ಯಮಿಗಳನ್ನಾಗಿಸುವ ಕಾಲೇಜಿನ ಬದ್ಧತೆಗೆ ನಿದರ್ಶನವಾಗಿದೆ.

ಕೋಸ್ಟಲ್ ಬುಲೆಟಿನ್ : 19.10.2024

# CANARA ENGINEERING COLLEGE

"Sudheendra Nagara"

BENJANAPADAV-57421

COASTAL BULLETIN

ಮಂಗಳೂರು: ಕೆನರಾ ಇಂಜಿನಿಯರಿಂಗ್ ಕಾಲೇಜಿನ ನೂತನ ಬ್ಯಾಚ್ ಪ್ರಾರಂಭೋತ್ಸವ. ಉದ್ಯೋಗಿಗಳಲ್ಲ, ಉದ್ಯಮಿಗಳಾಗುವ ಕನಸಿರಲಿ: ರಂಗನಾಥ ಭಟ್



ಮಂಗಳೂರು: ವಿಜ್ಞಾನ ಎನ್ನುವುದು ಜ್ಞಾನವಾದರೆ ಎಂಜಿನಿಯರಿಂಗ್ ಎನ್ನುವುದು ತಂತ್ರಜ್ಞಾನ. ಈ ಪ್ರಾಯೋಗಿಕ ಜ್ಞಾನದಿಂದಲೇ ನಿತ್ಯ ಎಂಬಂತೆ ಜಗತ್ತಿನ ಆವಿಷ್ಕಾರ, ಬೆಳವಣಿಗೆಗಳು ನಡೆಯುತ್ತಲೇ ಇವೆ. ಭಾರತ ಜಾಗತಿಕವಾಗಿ ಅಭಿವೃದ್ಧಿಯ ಪಥದಲ್ಲಿ ಮುಂಚೂಣಿಗೆ ಬರುವಲ್ಲಿ ಯುವ ಎಂಜಿನಿಯರ್ ಗಳು ಹೊಸತನದ ಸವಾಲುಗಳನ್ನೆದುರಿಸುವ ಜಾಣ್ಮೆ, ಪ್ರತಿಭೆಯ ಅಗತ್ಯವಿದೆ. ತಾಂತ್ರಿಕ ಶಿಕ್ಷಣದ ಪದವಿಯೊಂದಿಗೆ ಉದ್ಯೋಗಿಗಳಾಗುವುದಕ್ಕಿಂತ ತಾವೇ ಉದ್ಯಮಿಗಳಾಗುವ ಉಜ್ವಲ ಭವಿಷ್ಯಕ್ಕೆ ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶಿಸುವ ವಿದ್ಯಾರ್ಥಿಗಳು ವಿಶ್ವಾಸದೊಂದಿಗೆ ಸಜ್ಜಾಗಬೇಕಿದೆ ಎಂದು ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಗೌರವ ಕಾರ್ಯದರ್ಶಿ ಕೆನರಾ ಇಂಜಿನಿಯರಿಂಗ್ ಕಾಲೇಜಿನ ಸಂಚಾಲಕ ಎಂ. ರಂಗನಾಥ್ ಭಟ್ ಹೇಳಿದರು. ಅವರು ನಗರದ ಟಿ.ವಿ.ರಮಣ್ ಪೈ ಕನ್ವೆನ್ಷನ್ ಸೆಂಟರ್ ನಲ್ಲಿ ರವಿವಾರ ಜರಗಿದ ಕೆನರಾ ಇಂಜಿನಿಯರಿಂಗ್ ಕಾಲೇಜಿನ 2024 ಸಾಲಿನ ನೂತನ ಬ್ಯಾಚ್ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು. ವಿದ್ಯೆಯೇ ಕಾಮಧೇನುವಾಗಿದ್ದು ಸತ್ಯ ಮತ್ತು ನೈತಿಕತೆಯ ಮೌಲ್ಯಗಳ ಹಾದಿಯಲ್ಲಿ ವಿದ್ಯಾರ್ಥಿಗಳು ಮುನ್ನಡೆಯುವ ಅಗತ್ಯವಿದೆ ಎಂದವರು ಹೇಳಿದರು.

ಆಡಳಿತ ಮಂಡಳಿಯ ವಿಶೇಷ ಆಹ್ವಾನಿತ ಗಿರಿಧರ್ ಕಾಮತ್ ಮಾತನಾಡಿ ಶಿಕ್ಷಣದ ಜತೆಗೆ ಭಾಷಾ, ಸಂವಹನ ಕೌಶಲ, ಶಿಷ್ಟಾಚಾರಗಳ ತಿಳುವಳಿಕೆ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತವೆ ಎಂದರು.ಆಡಳಿತ ಮಂಡಳಿ ಉಪಾಧ್ಯಕ್ಷ ಕೆ.ಸುರೇಶ್ ಕಾಮತ್ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿ ಸವಾಲುಗಳು ಎಲ್ಲ ರಂಗಗಳಲ್ಲಿವೆ. ಶಿಸ್ತಿನೊಂದಿಗೆ ಗುರಿಯತ್ತ ಗಮನ ಹರಿಸಿ ಮೌಲ್ಯಗಳಿಗೆ ಜೀವನದಲ್ಲಿ ಮಹತ್ವ ನೀಡಬೇಕಾಗಿದೆ ಎಂದರು.ಸಮಾರಂಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ಡೀನ್, ಡಾ. ಪ್ರಿಯಾ ವಿ.ಫ್ರ್ಯಾಂಕ್ , ನೇಮಕಾತಿ, ತರಬೇತಿ ವಿಭಾಗ, ಹಳೆ ವಿದ್ಯಾರ್ಥಿ ಸಂಪರ್ಕ ಮುಖ್ಯಸ್ಥೆ ದೀಪ್ತಿ ದಿನೇಶ್ ಪ್ರಭು ಹೊಸ ಬ್ಯಾಚಿನ ವಿದ್ಯಾರ್ಥಿಗಳಿಗೆ ಸಕಾಲಿಕ ಮಾರ್ಗದರ್ಶನ ನೀಡಿದರು. ಕಾಲೇಜಿನ ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್. ಸ್ವಾಗತಿಸಿದರು. ಸಹ ಪ್ರಾಧ್ಯಾಪಕಿ ಕ್ಯಾರಲ್ ಡಿ.ಮೆಲ್ಲೋ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಆಡಳಿತ ಮಂಡಳಿ ಸದಸ್ಯರು, ಕಾಲೇಜಿನ ಉಪ ಪ್ರಾಂಶುಪಾಲ ಅಕಾಡೆಮಿಕ್ ಡೀನ್ ಡಾ. ಡೇಮಿಯನ್ ಎ. ಡಿಮೆಲ್ಲೋ, ಡೀನ್ಸ್, ವಿಭಾಗ ಮುಖ್ಯಸ್ಥರು, ಬೋಧಕ, ಬೋಧಕೇತರರು ಉಪಸ್ಥಿತರಿದ್ದರು.

# CANARA ENGINEERING COLLEGE

"Sudheendra Nagara"

BENJANAPADAV-57421

COASTAL BULLETIN

## ಬೆಂಜನಪದವು: ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬೋಧಕರ ಜ್ಞಾನಾಭಿವೃದ್ಧಿ ಕಾರ್ಯಕ್ರಮ.

## ಕ್ವಾಂಟಮ್ ಕಂಪ್ಯೂಟಿಂಗ್ ಜ್ಞಾನದಿಂದ ಭವಿಷ್ಯದ ಸವಾಲುಗಳಿಗೆ ಉತ್ತರ: ಡಾ. ತ್ಯಾಗರಾಜು ಜಿಎಸ್



ಬಂಟ್ವಾಳ : ಇಂದಿನ ವೇಗದ ಜಗತ್ತಿನಲ್ಲಿ 'ಕ್ವಾಂಟಮ್ ಕಂಪ್ಯೂಟಿಂಗ್' ತಾಂತ್ರಿಕತೆಯ ಮಹತ್ವ ಹೆಚ್ಚುತ್ತಿದೆ. ಹೆಚ್ಚುತ್ತಿರುವ ಡೇಟಾ ಉತ್ಪಾದನೆಯ ಜತೆ ಶಾಸ್ತ್ರೀಯ ಕಂಪ್ಯೂಟರ್ ತಂತ್ರಜ್ಞಾನ ಹೊಂದಿಕೊಳ್ಳಲು ಕಷ್ಟವಾಗುತ್ತಿರುವುದು 'ಕ್ವಾಂಟಮ್ ಕಂಪ್ಯೂಟಿಂಗ್'ನ ಮಹತ್ವ ಹೆಚ್ಚಿಸಿದೆ. ಇದರಿಂದಾಗಿ ಸಂಕೀರ್ಣ ಸಮಸ್ಯೆಗಳನ್ನೂ ತ್ವರಿತ ಹಾಗೂ ಪರಿಪಕ್ವತೆಯಿಂದ ನಿರ್ವಹಿಸಲು ಸಾಧ್ಯವಾಗಿದೆ. ಹಾಗಾಗಿಯೇ ತಾಂತ್ರಿಕ ರಂಗದ ದಿಗ್ಗಜ ಕಂಪೆನಿಗಳ ಪೈಕಿ ಗೂಗಲ್ ಕೂಡಾ 'ಕ್ವಾಂಟಮ್ ಕಂಪ್ಯೂಟಿಂಗ್, ಕೃತಕ ಬುದ್ದಿಮತ್ತೆಯ ತಂತ್ರಜ್ಞರಿಗೆ ಹೊಸತನದ ಸವಾಲುಗಳಾಗಿ ಮಣೆ ಹಾಕುತ್ತಿದೆ. ಈ ನೆಲೆಯಲ್ಲಿ ಇಂದಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಭವಿಷ್ಯದ ಸವಾಲುಗಳಿಗೆ ಉತ್ತರಿಸಲು ಸನ್ನದ್ಧರಾಗಿಸುವ ಜವಾಬ್ದಾರಿ ನಮಗಿದೆ ಎಂದು ಉಜಿರೆ ಎಸ್‌ಡಿಎಂಐಟಿಯ ಇನ್ಫರ್ಮೇಶನ್ ಸೈನ್ಸ್ ಇಂಜಿನಿಯರಿಂಗ್ ಪ್ರಾಧ್ಯಾಪಕ , ವಿಭಾಗ ಮುಖ್ಯಸ್ಥ ಡಾ. ತ್ಯಾಗರಾಜು ಜಿಎಸ್. ಹೇಳಿದರು.

ಅವರು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯದ ಸಹಯೋಗದಲ್ಲಿ ಕೆನರಾ ಇಂಜಿನಿರಿಂಗ್ ಕಾಲೇಜಿನಲ್ಲಿ ಆ.22 ಗುರುವಾರ ಇನ್ಫರ್ಮೇಶನ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಗುರುವಾರ 'ಕ್ವಾಂಟಮ್ ಕಂಪ್ಯೂಟಿಂಗ್' ಕುರಿತಂತೆ ಆರಂಭಗೊಂಡ ಮೂರು ದಿನಗಳ ಬೋಧಕರ ಜ್ಞಾನಾಭಿವೃದ್ಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ಕಾಲೇಜಿನ ಪ್ರಾಂಶುಪಾಲರಾದ ಡಾ. ನಾಗೇಶ್ ಹೆಚ್. ಆರ್. ಅಧ್ಯಕ್ಷತೆ ವಹಿಸಿದ್ದರು. ವಿಭಾಗ ಮುಖ್ಯಸ್ಥ ಡಾ. ಹೆಚ್. ಮನೋಜ್ ಗಡಿಯಾರ್ ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕರಾದ ಸಹ ಪ್ರಾಧ್ಯಾಪಕಿ ಡಾ. ಉಷಾ ಜಿ.ಆರ್. ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಹಾಯಕ ಪ್ರಾಧ್ಯಾಪಕ ರಂಗನಾಥ್ ಕೆ. ವಂದಿಸಿದರು. ಸುಷ್ಮಾ ಎಂ.ಡಿ. ಕಾರ್ಯಕ್ರಮ ನಿರೂಪಿಸಿದರು.  ಕಾರ್ಯಕ್ರಮದ ಮುಂದಿನ ಎರಡು ದಿನಗಳಲ್ಲಿ ಬೆಂಗಳೂರಿನ ಕ್ವಾಂಟಮ್ ರಿಸರ್ಚ್ ಲ್ಯಾಬ್ ಸ್ಥಾಪಕ ಸಿಇಒ ದೊರೈ ಕಾರ್ತಿಗಣೇಶ್, ಮಂಗಳೂರು ಸೆವೆನ್ ಎಡ್ಜ್ ಪ್ರೈ.ಲಿ ಹಿರಿಯ ಪ್ರಬಂಧಕ ಪ್ರಶಾಂತ್ ಕುಮಾರ್ ಎ, ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳಲಿದ್ದಾರೆ.

# CANARA ENGINEERING COLLEGE

"Sudheendra Nagara"
BENJANAPADAV-57421

COASTAL BULLETIN

## ಬೆಂಜನಪದವು: ಕೆನರಾ ಇಂಜಿನಿಯರಿಂಗ್ ಕಾಲೇಜಿಗೆ ಪ್ರತಿಷ್ಠಿತ ISO 9001:2015 ಮತ್ತು ISO 21001 ಪ್ರಮಾಣಪತ್ರ



ಬಂಟ್ವಾಳ : ಮಂಗಳೂರಿನ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಪ್ರಾಯೋಜಿತ ಬೆಂಜನ ಪದವಿನ ಕೆನರಾ ಇಂಜಿನಿಯರಿಂಗ್ ಕಾಲೇಜಿಗೆ ಪ್ರತಿಷ್ಠಿತ ISO 9001:2015 ಮತ್ತು ISO 21001 ಪ್ರಮಾಣಪತ್ರದ ಮಾನ್ಯತೆ ಲಭಿಸಿದೆ.ಕಾಲೇಜಿನ ಮೂರು ಕೋರ್ಸುಗಳಿಗೆ 2022 ರಲ್ಲಿ ಎನ್.ಬಿ.ಎ ಮಾನ್ಯತೆ ,2023ರಲ್ಲಿ ನ್ಯಾಕ್ ಎಕ್ರೆಡಿಟೇಶನ್ ನಲ್ಲಿ ಎ ಗ್ರೇಡ್ ಮಾನ್ಯತೆ ಬಳಿಕ ಇದೀಗ ಕಾಲೇಜು ಮತ್ತೊಂದು ಮಹತ್ವದ ಸಾಧನೆ ದಾಖಲಿಸಿ ದಂತಾಗಿದೆ. ಈ ಮೂಲಕ ಸಂಸ್ಥೆಯ ಉನ್ನತ ಮಟ್ಟದ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳಿಗೆ ಗೌರವ ದೊರೆತಂತಾಗಿದೆ .ಇದೀಗ ಈ ಭಾಗದಲ್ಲಿ ಐ.ಎಸ್.ಒ. ಮಾನ್ಯತೆ ಪಡೆದ ಮೊದಲ ಇಂಜಿನಿಯರಿಂಗ್ ಕಾಲೇಜು ಎನ್ನುವ ಹಿರಿಮೆಗೆ ಕೆನರಾ ಇಂಜಿನಿಯರಿಂಗ್ ಕಾಲೇಜು ಪಾತ್ರವಾಗಿದೆ.ಈ ಮಾನ್ಯತೆ ವಿದ್ಯಾರ್ಥಿ ಕೇಂದ್ರಿತ ಗುಣಮಟ್ಟದ ಬೋಧನಾ ಕ್ರಮದಲ್ಲಿ ಕಾಲೇಜು ಹೊಂದಿರುವ ಬದ್ಧತೆಯನ್ನು ಗುರುತಿಸಿದೆ. ಈ ಮೂಲಕ ಕೆನರಾ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆಯಲ್ಲಿ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯಾಗಿ ಗುರುತಿಸಲ್ಪಟ್ಟಿದೆ . ಇಂಟರ್ನ್ಯಾಷನಲ್ ಎಕ್ರೆಡಿಟೇಶನ್ ಟ್ರೆಡಿಶನ್ ಸರ್ವೀಸ್ (ಐ.ಎ.ಎಸ್.)ಮಾನ್ಯತೆ ಪಡೆದ ಗ್ಲೋಬಲ್ ಎಂ.ಸಿ.ಎಸ್ ಲಿಮಿಟೆಡ್ ಸಂಸ್ಥೆಯು ಪ್ರಮಾಣಪತ್ರವನ್ನು ನೀಡುತ್ತಿದ್ದು ಇದಕ್ಕೆ ಪೂರ್ವಭಾವಿಯಾಗಿ ಕಾಲೇಜನ್ನು ಸಂದರ್ಶಿಸಿ ಸಮಗ್ರ ಪರಿಶೀಲನೆ ಮತ್ತು ಅವಲೋಕನವನ್ನು ನಡೆಸಿದೆ.ಕೆನರಾ ಇಂಜಿನಿಯರಿಂಗ್ ಕಾಲೇಜಿನ ಕಲಿಕಾ ಮತ್ತು ಬೋಧನಾ ಪ್ರಕ್ರಿಯೆಗಳು ರಾಷ್ಟ್ರೀಯ ಗುಣಮಟ್ಟದಲ್ಲಿರುವುದು ಈ ಮಾನ್ಯತೆಯಿಂದ ಖಚಿತಗೊಂಡಂತಾಗಿದೆ. ಕಾಲೇಜು ಕಲಿಕಾ ಮತ್ತು ಬೋಧನಾ ಗುಣಮಟ್ಟ ಘನತೆ ಹಾಗೂ ಪರಿಪೂರ್ಣತೆಯನ್ನು ಸಾಧಿಸುವಲ್ಲಿ ನಿರಂತರ ಬದ್ಧತೆಗೆ ಇದು ಸಾಕ್ಷಿಯಾಗಿದೆ ಈ ಮಾನ್ಯತೆಯಿಂದ ವಿದ್ಯಾರ್ಥಿಗಳಿಗೆ ಅತ್ಯುನ್ನತ ಗುಣಮಟ್ಟದ ಕಲಿಕಾ ಅನುಭವಗಳನ್ನು ಒದಗಿಸಲು ಸಾಧ್ಯವಾಗಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಔದ್ಯೋಗಿಕ ಭವಿಷ್ಯ ಉಜ್ವಲಗೊಳಿಸಿದಂತಾಗಿದೆ.

# CANARA ENGINEERING COLLEGE

"Sudheendra Nagara"

BENJANAPADAV-57421

COASTAL BULLETIN

## ಮಂಗಳೂರು :ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ.ಸವಾಲು, ಸ್ವರ್ಧಾತ್ಮಕ ಬದುಕಿಗೆ ಸನ್ನದ್ಧರಾಗಿ : ಪ್ರದೀಪ್ ಜಿ.ಪೈ.




ಮಂಗಳೂರು: ಅಮೆರಿಕಾ ವರ್ಷಕ್ಕೆ ಲಕ್ಷ ಇಂಜಿನಿಯರಿಂಗ್ ಪದವೀಧರರನ್ನು ಸೃಷ್ಟಿಸಿದರೆ ಭಾರತದಲ್ಲಿ ಈ ಸಂಖ್ಯೆ 15 ಲಕ್ಷ ಮೀರುತ್ತದೆ. ಬರೇ ಪದವಿಯಿಂದ ಯಶಸ್ಸು ಸಾಧ್ಯವಿಲ್ಲ. ವೃತ್ತಿ ಜೀವನದ ಸವಾಲು, ಸ್ವರ್ಧಾತ್ಮಕತೆಗೆ ಸನ್ನದ್ಧರಾದಾಗ, ನಿರಂತರ ಕಲಿಕೆಗೆ ಆಸಕ್ತರಾದಾಗ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ. ಸತತ ಪರಿಶ್ರಮ, ಬದ್ಧತೆ, ಕೃತಜ್ಞತೆಯ ಮನೋಭಾವವಿದ್ದಾಗ ಯಶಸ್ಸು, ಸಂಪತ್ತು ನಮ್ಮನ್ನು ಹಿಂಬಾಲಿಸುತ್ತದೆ ಎಂದು ಕೆನರಾ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಕೌನ್ಸಿಲ್ ಸಂಚಾಲಕ , ಉದ್ಯಮಿ, ಹಾಂಗ್ಯೋ ಐಸ್ಕ್ರೀಂನ ಆಡಳಿತ ನಿರ್ದೇಶಕ ಪ್ರದೀಪ್ ಜಿ.ಪೈ ಹೇಳಿದರು.ನಗರದ ಟಿ.ವಿ.ರಮಣ್ ಪೈ ಕನ್ವೆನ್ಷನ್ ಸೆಂಟರ್ ನಲ್ಲಿ ಶನಿವಾರ ಜರಗಿದ ಕೆನರಾ ಇಂಜಿನಿಯರಿಂಗ್ ಕಾಲೇಜಿನ 20 ನೇ ಬ್ಯಾಚಿನ ಪದವಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.ಉದ್ಯೋಗಿಗಳಾಗುವುದು ಎಲ್ಲರ ಕನಸಾಗಿದೆ. ಆದರೆ ಉದ್ಯೋಗ ನೀಡುವವರಾಗುವ ನಿಟ್ಟಿನಲ್ಲೂ ವಿಪುಲ ಅವಕಾಶಗಳ ಸವಾಲನ್ನೂ ಸ್ವೀಕರಿಸಲು ಪದವೀಧರರು ಮುಂದಾಗಬೇಕು ಎಂದವರು ಹೇಳಿದರು.ಕಾಲೇಜಿನ ಸಂಚಾಲಕ, ಗೌರವ ಕಾರ್ಯದರ್ಶಿ ಎಂ. ರಂಗನಾಥ್ ಭಟ್ ಮಾತನಾಡಿ ಕೆನರಾ ಸಂಸ್ಕೃತಿಯೊಂದಿಗೆ ಬೆಳೆದ ಪದವೀಧರರಿಗೆ ಉಜ್ವಲ ಭವಿಷ್ಯವಿದೆ. ಹೆತ್ತವರ ಕನಸೀಗ ನನಸಾಗಿದೆ. ಮುಂದೆ ಉದ್ಯಮರಂಗದಲ್ಲೂ ಯಶಸ್ಸು, ಸಾಧನೆ ನಿಮ್ಮದಾಗಲಿ ಎಂದು ಹಾರೈಸಿದರು.ಕಾಲೇಜಿನ ಉಪ ಪ್ರಾಂಶುಪಾಲ, ಅಕಾಡೆಮಿಕ್ ಡೀನ್ ಡಾ. ಡೇಮಿಯನ್ ಎ. ಡಿಮೆಲ್ಲೋ ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಿದರು.ಆಡಳಿತ ಮಂಡಳಿ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಉಪಾಧ್ಯಕ್ಷ ಕೆ.ಸುರೇಶ್ ಕಾಮತ್ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿ ಹೆತ್ತವರ ತ್ಯಾಗ, ಶಿಕ್ಷಕರ ಸಹಕಾರ, ಕಲಿತ ಸಂಸ್ಥೆಯ ಕೊಡುಗೆಯನ್ನು ಪದವೀಧರರೆಂದೂ ಮರೆಯಬಾರದು ಎಂದರು.ವಿದ್ಯಾರ್ಥಿಗಳಾದ ವಿಜಯರಾಜ್ ಪೈ ಗಿರಿಧರ ಕಿಣಿ,ಎಸ್ ಸಂಜನಾ ಪೈ,ಅಕ್ಷಯ್ ಅನಿಸಿಕೆ ವ್ಯಕ್ತಪಡಿಸಿದರು. ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.ಕಾಲೇಜಿನ ಆಡಳಿತ ಮಂಡಳಿಯ ಜತೆ ಕಾರ್ಯದರ್ಶಿ ಟಿ. ಗೋಪಾಲಕೃಷ್ಣ ಶೆಣೈ, ಸದಸ್ಯೆ ಅಶ್ವಿನಿ ಕಾಮತ್ . ವಿಶೇಷ ಆಹ್ವಾನಿತ ಗಿರಿಧರ್ ಕಾಮತ್ ಆಡಳಿತ ಕೌನ್ಸಿಲ್ ಸದಸ್ಯ ವಿನಾಯಕ ಕಾಮತ್ ಕಾಲೇಜಿನ ಡೀನ್ ಎಕ್ರೆಡಿಟೇಶನ್ ಡಾ. ವೆಂಕಟೇಶ್ ಎನ್., ಕಂಪ್ಯೂಟರ್ ಸೈನ್ಸ್ ವಿಭಾಗ ಮುಖ್ಯಸ್ಥ ಡಾ. ಸುನೀಲ್ ಕುಮಾರ್ ಬಿ.ಎಲ್, ಇನ್ಫರ್ಮೇಶನ್ ಸೈನ್ಸ್ ವಿಭಾಗ ಮುಖ್ಯಸ್ಥ ಡಾ.ಹೆಚ್.ಮನೋಜ್ ಗಡಿಯಾರ್, ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗ ಮುಖ್ಯಸ್ಥ ಡಾ. ದಯಾನಂದ್ ಜಿ.ಕೆ. ಸಮಾರಂಭದ ಮುಖ್ಯ ಸಮನ್ವಯಕಾರರಾದ ಜಯಶ್ರೀ ಕೆ. ಅನಂತ ಕೃಷ್ಣ ಕಾಮತ್ ಉಪಸ್ಥಿತರಿದ್ದರು.ಕಾಲೇಜಿನ ಪ್ರಾಂಶುಪಾಲ ಡಾ. ನಾಗೇಶ್ ಹೆಚ್. ಆರ್. ಸ್ವಾಗತಿಸಿದರು.ಸಹ ಪ್ರಾಧ್ಯಾಪಕಿ ಕ್ಯಾರಲ್ ಡಿ.ಮೆಲ್ಲೋ ಸಾದಕ ವಿದ್ಯಾರ್ಥಿಗಳು, ಪದವಿಧರ ವಿದ್ಯಾರ್ಥಿಗಳ ವಿವರ ನೀಡಿ ವಂದಿಸಿದರು. ನೇಮಕಾತಿ, ತರಬೇತಿ ವಿಭಾಗ, ಹಳೆ ವಿದ್ಯಾರ್ಥಿ ಸಂಪರ್ಕ ಮುಖ್ಯಸ್ಥೆ ದೀಪ್ತಿ ದಿನೇಶ್ ಪ್ರಭು ಕಾರ್ಯಕ್ರಮ ನಿರೂಪಿಸಿದರು

ADVERTISEMENT

# CANARA ENGINEERING COLLEGE

"Sudheendra Nagara"

BENJANAPADAV-574219

COASTAL BULLETIN

## ಬೆಂಜನಪದವು: ರಾಜ್ಯಮಟ್ಟದ ತಾಂತ್ರಿಕ ಸಾಂಸ್ಕೃತಿಕ ಉತ್ಸವ "ಆಕೃತಿ" 2024 ಸಂಪನ್ನ. ಸ್ಪರ್ಧಾಕೂಟದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದ ಕೆನರಾ ಕಾಲೇಜು ಮಂಗಳೂರು.



ಬಂಟ್ವಾಳ :ತಾಲೂಕಿನ ಬೆಂಜನಪದವು ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೇ 9ರಿಂದ 11ರ ಶನಿವಾರ ಮುಕ್ತಾಯಗೊಂಡ ಮೂರು ದಿನಗಳ ರಾಜ್ಯಮಟ್ಟದ ಅಂತರ್ ಕಾಲೇಜು ತಾಂತ್ರಿಕ ಸಾಂಸ್ಕೃತಿಕ ಉತ್ಸವ ಆಕೃತಿ 2024 ಯಶಸ್ವಿಯಾಗಿ ಸಂಪನ್ನಗೊಂಡಿತು.ಸ್ಪರ್ಧಾಕೂಟದಲ್ಲಿ ಸಮಗ್ರ ಪ್ರಶಸ್ತಿಯನ್ನು ಕೆನರಾ ಕಾಲೇಜು ಮಂಗಳೂರು ತಂಡ ಗೆದ್ದುಕೊಂಡಿದೆ. ನಿಟ್ಟೆ ಇಂಜಿನಿಯರಿಂಗ್ ಕಾಲೇಜು ರನ್ನರ್ಸ್ ಅಪ್ ಪ್ರಶಸ್ತಿಯನ್ನು ಪಡೆದುಕೊಂಡಿತು.

ಕಾಲೇಜು ಆಡಳಿತ ಮಂಡಳಿ ಕೆನರಾ ಹೈಸ್ಕೂಲ್ ಅಸೋಸಿಯೇಷನ್ ಗೌರವ ಕಾರ್ಯದರ್ಶಿ ಎಮ್. ರಂಗನಾಥ ಭಟ್ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ನಾಗೇಶ್ ಹೆಚ್.ಆರ್.ವಿದ್ಯಾರ್ಥಿ ಕ್ಷೇಮಪಾಲನಾ ಡೀನ್ ಡಾ.ಪ್ರಿಯಾ ವಿ.ಫ್ರ್ಯಾಂಕ್ ,ಆಕೃತಿ ಮುಖ್ಯ ಸಮನ್ವಯಕಾರ ನವೀನ್.ಎ. ಕಲಾಲ್ , ವಿದ್ಯಾರ್ಥಿ ಕೌನ್ಸಿಲ್ ಅಧ್ಯಕ್ಷ ವಿಜಯರಾಜ್ ಪೈ ಸಹಿತ ಪದಾಧಿಕಾರಿಗಳು ಉಪಸ್ಥಿತರಿದ್ದರು.